ಕೋಟಿ ಚೆನ್ನಯ ಪಾಡ್ದನ

ಶಂಕರ ನಾರಾಯಣ ದೂಜ ಪೂಜಾರಿ (ಎಸ್.ಎನ್.ಡಿ. ಪೂಜಾರಿ)

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ತುಳುಭವನ, ಪೋಸ್ಟ್ ಅಶೋಕನಗರ, ಉರ್ವಸ್ಟೋರ್,
ಮಂಗಳೂರು – 575 006.

ಕೋಟಿ ಚೆನ್ನಯ ಪಾಡ್ದನ

Koti Chennaya Paaddana

(ಬಂಟೆರೆ ಸಂಧಿ)

ಪಾಡ್ದನ ಹಾಡಿದವರು :

ರಘು ಪರವ/ ವಸಂತಿ ಪರವ

ಸಂಪಾದಕ :

ಶಂಕರ ನಾರಾಯಣದೂಜ ಪೂಜಾರಿ

(ಎಸ್.ಎನ್.ಡಿ. ಪೂಜಾರಿ)

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ತುಳುಭವನ, ಪೋಸ್ಟ್: ಅಶೋಕನಗರ

ಉರ್ವಸ್ಟೋರ್, ಮಂಗಳೂರು – 575006

KOTI CHENNAYA PAADDANA : COLLECTED AND TRANSCRIBED BY **SHANKAR NARAYANA DOOJA POOJARY (SND POOJARY)**
CD JUBILEE CENTRE. LA CAMPALA COLONY, MIRAMAR, GOA-403 001
Email:shanakrpoojary2003@yahoo.co.in;
Mobile : 9422442761

Chief Editor	:	**Dayananda G. Kathalsar** President, Karnataka Tulu Sahitya Academy
Publisher	:	**Kavitha** Registrar, Karnataka Tulu Sahitya Academy
Published By	:	**Karnataka Tulu Sahitya Academy** Tulu Bhavana, Post: Ashoknagar, Urwa Store, Mangaluru – 575 006. Phone : 0824 2459389, 7411572115
Email	:	**tuluacademy@karnataka.gov.in** tulu.academy@yahoo.co.in
Copy Right	:	**Karnataka Tulu Sahitya Academy**
First Impression	:	2022
Size	:	Demy 1/ 8
Paper used	:	70 GSM
No. of copies	:	300
Pages	:	14+342+10 = 366
Price	:	200/-
Designed & Printed at	:	**Guptha Offset Pinters** S.J.H. Road, Vidyaranyapuram, Mysuru – 570008. Mob : 9448067939

(ಕೋಟಿ ಚೆನ್ನಯ ಥೀಮ್ ಪಾರ್ಕ್, ಕಾರ್ಕಳ)

ಗುರ್ಕಾರ್ರೆನ ಮದಿಪು

ಸತ್ಯೊಡು ಬತ್ತಿನಕ್ಲೆಗ್ ತಿಗಲೆಡ್ ಸಾದಿ ಅಧರ್ಮಡ್ ಬತ್ತಿನಕ್ಲೆಗ್ ಸುರಿಯೊಡು ಸಾದಿಂದ್ ಪಂಡಿನಕುಲು ತುಳುವನಾಡ್‌ದ ವೀರ ಪುರುಷೆರ್ ಕೋಟಿಚೆನ್ನಯೆರ್. ಜಗತ್ತ್‌ಡ್ ಮೆಗ್ಯೆ ಪಲಯಲ್ಲು ಎಂಚ ಇಪ್ಪೊಡುಂದ್ ಕೇಂಡ, ಕೋಟಿ ಚೆನ್ನಯೆರ್‌ಲೆಕ ಇಪ್ಪೊಡು ಪನ್ಪುನಂಚಿತ್ತಿನ ಪಾತೆರ ನಮ ಕೇನುವ. ಅನ್ಯಾಯದ ವಿರುದ್ಧ ಸೆಟೆದ್ ಉಂತುನಂಚಿತ್ತಿನ ತಾಕತ್ತ್‌ದ ಬಿರ್ದ್‌ಬಿರ್ಸೆರ್ ವೀರೆರ್ ಕೋಟಿಚೆನ್ನಯೆರ್ ಆಂಡ ಕೋಟಿ ಅತೀ ಶಾಂತ ಸ್ವಭಾವದಾರ್ ಚೆನ್ನಯೆ ಅತೀ ಶೀಘ್ರ ಕೋಪಿ ಆದುಪ್ಪುವೆರ್. ಅಂಚಿತ್ತಿನ ಕೋಟಿ ಚೆನ್ನಯೆರ್ ತುಳುನಾಡ್‌ದ ಸಿರಿಗುಂಡೊಡು ಜೋಡು ನಂದಾದೀಪ ಆದ್ ಅರ್ಲೊಂದುಲ್ಲೆರ್ ಅಪ್ಪೆ ದೇಯಿ ಬೈದೆದಿನ ಪುಣ್ಯಗರ್ಭಡ್ ಉಂಡಾಯಿನಂಚಿತ್ತಿನ ಈ ತುಳುನಾಡ್‌ದ ಬೀರೆರ್ ತುಳುನಾಡ್‌ದ ಗರೋಡಿಲೆಡ್ ಇನಿ ಕರಣೀಕದ ಶಕ್ತಿಲಾದ್ ಮೆಗೆತ್ ಬೈದೆರ್ ತುಳುವನಾಡ್‌ದ ಬಂಟೆರ್ ಪಂಡ್‌ದ್ ಪುಗರ್ತೆ ಪಡೆದೆರ್, ಅಂಚಾದ್ ಮೊಕಲ್ನ ಸಂಧಿಗ್ ಬಂಟೆರೆ ಸಂಧಿ ಪಂಡ್‌ದ್ ಪುದರ್. ಊರುರ್ದು ಊರುಗು, ಪ್ರದೇಶರ್ದ್ ಪ್ರದೇಶೊಗು, ಗರೋಡಿರ್ದ್ ಗರೋಡಿಗ್, ಒಂಜಾತ್ ಪಾಡ್ದನ, ಪಂಡ ಈ ಬಂಟೆರೆ ಸಂಧಿಡ್ ಒಂಜಾತ್ ವ್ಯತ್ಯಾಸೊಲು ಇಪ್ಪುಂಡು ಬೇತೆ ಬೇತೆ ರೀತಿದ ಸಂಧಿಲ್ನ ದಾಖಲೀಕರಣ ಬಾರಿ ಪ್ರಾಮುಖ್ಯ, ಸಂಶೋಧನೆ, ಅನುವಾದ, ದಾಖಲೀಕರಣ, ನೆಕ್ಕ್ ಒಂಜಾತ್ ನಮ ಅವಕಾಶ ಕೊರೊಡು ಅಂಚಿತ್ತಿನ ಪುಸ್ತಕೊಲು ನಮ್ಮವುಲು ಪ್ರಕಟ ಆವೊಡು ಪನ್ಪುನಂಚಿತ್ತಿನ ಗಟ್ಟಿ ನಿರ್ಧಾರ ಮಲ್ತ್‌ದ್ ಒಟ್ಟು ಮಸ್ತ್ ಪುಸ್ತಕದ ಪ್ರಕಟನೆದ ಯೋಜನೆ ಪಾಡೊಂದ. ಐಟ್ ಎಂಕುಲು ಆಯ್ಕೆ ಮಲ್ತಿನಂಚಿತ್ತಿನ ಗೌರವಾನ್ವಿತ ಎಸ್.ಎನ್.ಡಿ.ಪೂಜಾರ್ಲು ಸಂಪೊಲ್ತಿನ ರಘು ಪರವ ಬೊಕ್ಕ ವಸಂತಿ ಪರವ ಮೊಕುಲು ಕಟ್ಟಿನಂಚಿತ್ತಿನ ಬಂಟೆರೆ ಸಂಧಿ ಇನಿ ಪುಸ್ತಕದ ಒರುಕು ಕನವೊಡು ಒಂಜಾತ್ ತುಳು ಜನಪದ ತಜ್ಞೆರ್ನ ಜನಪದ ಅಧ್ಯಯನಕಾರ್ರೆರ್ನ, ಜನಪದ ವಿದ್ಯಾರ್ಥಿಲೆನ ಉಂದೊಂಜಿ ಸೊತ್ತಾವೊಡು ಒಂಜಿ ಆಕರ ಗ್ರಂಥ ಆವೊಡು ಪನ್ಪಿ ನೆಲೆಟ್ ಉಂದೆನ್ ಪ್ರಕಟ ಮಲ್ತೊಂದುಲ್ಲ. ಬಾರಿ ಪೊರ್ಲುಡು, ಬಾರಿ ಕಷ್ಟೊಡು ಉಂದೆನ್ ಸಂಪೊಲ್ತಿನ ಗೌರವಾನ್ವಿತ ಎಸ್.ಎನ್.ಡಿ ಪೂಜಾರ್ಲೆಗ್ಲ ತನ್ಕುಲ್ನ ಬದ್‌ಕ್‌ಡ್ ಸಂಧಿ, ಪಾಡ್ದನೊಲೆನೇ ಉಸುಲಾದ್

ದೀಡ್ದೊನ್ನಂಚಿತ್ತಿನ ದೈವದ ಕೊಡಿಯಡಿಟ್ ತನ್ನ ತನುನು ತರೆತ್ತಿನಂಚಿತ್ತಿನ ರಘು ಪರವ ಬೊಕ್ಕ ವಸಂತಿ ಪರವ ಮೊಕಲ್ನ ಹಣೆತ್ತ ಗೇನದ ತುಪ್ಪೆ ಮೊಕ್ಲೆಗ್ ಯಾನ್ ಉಡಲ್‌ದಿಂಜಿನ ಪ್ರೀತಿದ ಸೊಲ್ಮೆಲೆನ್ ಸಂದಾಯ್ತ ಮಲ್ತೊಂದುಲ್ಲೆ. ಅಧ್ಯಯನಕಾರೆರ್, ದಾಖಲೀಕರಣ ಮಲ್ಪುನಕುಲು, ಇಂಚಿತ್ತಿನಕಲ್ನ ಉಡಲ್‌ಡಿತ್ತಿನಂಚಿತ್ತಿನ ಅತ್ತ್ಂಡ ಹಣೆಟ್ ಪಂಡ ಮಸ್ತಕೊಡು ಇತ್ತಿನಂಚಿತ್ತಿನ ನನಲಾತ್ ಪಾಡ್ದನೊಲೆನ್ ಇತ್ತೆನೆ ಸಂಪೊಲ್ತುದು ಅವೆನ್ ಧಾಖಲೀಕರಣ ಮಲ್ಪುನಂಚಿತ್ತಿನ ಅವಶ್ಯಕತೆ ಉಂಡು. ಉಂದು ಪೂರ ಒರಿಯೊಡು ಐಕ್ ಬೋಡಾದ್ ಇಂಚಿತ್ತಿನ ಕೃತಿಕ್ಲೆಗ್ ಅಕಾಡೆಮಿ ಸಾಕಾರ ಸಾಧ್ಯ ಆಯಿನಾತ್ ಕೊರ್ಪುಂಡು ಪನ್ಪುನ ಪಾತೆರದೊಟ್ಟುಗೆ ಈ ಕೃತಿನ್ ಓದುಲೆ, ಬರವುಗಾರೆರೆಗ್, ಸಂಧಿ ಪನ್ಪುನಕ್ಲೆಗ್ ಈ ಪುಸ್ತಕೊನು ಓದುನವೇ ನಿಕುಲು ಅಕ್ಲೆಗ್ ಕೊರ್ಪುನ ಮಲ್ಲ ಕೊಡುಗೆ ಪನ್ಪುನ ಪಾತೆರ ಪಂಡೊಂದು ಯಾನ್ ಮಾತೆರೆಗ್ಲ ಈ ಪೊರ್ತುಡು ಎಡ್ಡೆಪ್ಪುನು ಬಯಕುವೆ ಸೊಲ್ಮೆಲು.

ದಯಾನಂದ ಜಿ. ಕತ್ತಲ್‌ಸಾರ್
ಗುರ್ಕಾರ್ರ್, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಸಂಪಾದಕನ ಮಾತು

ಕಥನಕಾವ್ಯ

ಕೋಟಿ ಚೆನ್ನಯ ಪಾಡ್ದನ ಅಥವಾ ಬಂಟೆರೆ ಸಂದಿ ತುಳು ಸಂಸ್ಕೃತಿಯ ಅಭಿನ್ನ ಭಾಗ. ಈ ಮೌಖಿಕ ಕಥನ ಕಾವ್ಯವನ್ನು ತುಳುವಿನ ಮಹಾಕಾವ್ಯವೆಂದು ಪರಿಗಣಿಸಲಾಗಿದೆ. ಸಿರಿ ಪಾಡ್ದನ ಇನ್ನೊಂದು ತುಳು ಮಹಾಕಾವ್ಯ.

ಕೋಟಿ ಚೆನ್ನಯ ಪಾಡ್ದನಕೋಟಿ ಚೆನ್ನಯ ಹೆಸರಿನ ಬಿಲ್ಲವ ಜನಾಂಗದ ಅವಳಿ ಯೋಧರ (ಬಂಟರ) ಜೀವನ ಚರಿತ್ರೆಯನ್ನು ನಿರೂಪಿಸುತ್ತದೆ. ಕೋಟಿ ಚೆನ್ನಯರ ಬಗ್ಗೆ ಲಿಖಿತ ದಾಖಲೆಗಳು ಲಭ್ಯವಾಗಿಲ್ಲ; ಆದರೆ ಅವರ ಕಥನ ಕಾವ್ಯ ನಾರಾರು ವರ್ಷಗಳಿಂದ ತುಳು ಜಾನಪದ ಲೋಕದಲ್ಲಿ ಪ್ರಚಲಿತವಾಗಿದೆಯೆಂದು ತಿಳಿದುಬರುತ್ತದೆ. ಕೋಟಿ ಚೆನ್ನಯ ಪಾಡ್ದನದಲ್ಲಿ ಕೋಟಿ ಮತ್ತು ಚೆನ್ನಯರ ಹುಟ್ಟು, ಬೆಳವಣಿಗೆ, ಕಾರ್ಯ, ಹಾಗೂ ಅವರ ದುರ್ಮರಣದ ವಿಷಯ ವಿಸ್ತಾರವಾದ ವಿವರಣೆ ಸಿಗುತ್ತದೆ. ಆದ್ದರಿಂದ ಇದೊಂದು ಕೋಟಿ ಚೆನ್ನಯರ ಮೌಖಿಕ ಚರಿತ್ರೆಯೆಂದು ಹೇಳಲಾಗಿದೆ.

ಒಂದು ದೃಷ್ಟಿಯಲ್ಲಿ ಕೋಟಿ ಚೆನ್ನಯ ಪಾಡ್ದನ ಬಿಲ್ಲವ ಜನಾಂಗದ ಸಂಸ್ಕೃತಿಕ ಚರಿತ್ರೆಯೆಂದೂ ಹೇಳಬಹುದು. ಕೃಷಿ ಮಾಡುವುದು, ಗಿಡಮೂಲಿಕೆಯ ಮದ್ದುಕೊಡುವುದು, ಭೇಟಿಯಾಡುವುದು, ಹೆಂಡ ತೆಗೆಯುವುದು, ಗತಕಾಲದ ತುಂಡರಸರ ಸೈನ್ಯದಲ್ಲಿ ಯೋಧರಾಗಿ ಹೋರಾಡುವುದು, ದೈವ (ಭೂತ)ಗಳ ಅರ್ಚಕರಾಗಿ ಪೂಜೆ ಮಾಡುವುದು, – ಈ ಕಾರ್ಯಗಳನ್ನು ಬಿಲ್ಲವ ಸಮಾಜ ಮಾಡುತ್ತಾ ಬಂದಿದೆ.

ಪ್ರಸ್ತುತ ಪಾಡ್ದನದ ದಾಖಲೀಕರಣದ ಬಗ್ಗೆ :

ಪ್ರಸ್ತುತ ಕೋಟಿ ಚೆನ್ನಯ ಪಾಡ್ದನ ಹಾಡಿದವರು ರಘುಯಾನೆ ಜಗ್ಗು ಪರವ ಮತ್ತು ಅವರ ಪತ್ನಿ ವಸಂತಿ ಪರವ. ರಘು ಪರವರು ಪ್ರಸಿದ್ಧ ಭೂತಕಲಾವಿದರು ಹಾಗೂ ಪಾಡ್ದನ ಗಾಯಕರು. ವಸಂತಿ ಪರವರು ಕೂಡಾ ಹೆಸರುವಾಸಿ ಪಾಡ್ದನ ಗಾಯಕಿ. ಈ ಕೋಟಿ ಚೆನ್ನಯ ಪಾಡ್ದನ ಪಾಠದ ಧ್ವನಿ ಮುದ್ರಣ ನನ್ನ ನಕ್ರೆ ಮುಂಗಿ

ಮನೆಯಲ್ಲಿ 15-10-2017ರಲ್ಲಿ ನೆರವೇರಿತು. ನಾನು ವಾಯಿಸ್‌ರೆಕೋರ್ಡರ್ ಉಪಕರಕಣದಲ್ಲಿ ದಾಖಲೀಕರಣ ಮಾಡಿದೆ. ಮುಂಜಾಗ್ರತೆಯ ರೂಪದಲ್ಲಿ ನಮ್ಮ ಕಾರ್ಕಳದ ಸುವರ್ಣ ಸ್ಟುಡಿಯೋದ ವೀಡಿಯೋಗ್ರಾಫರ್ ನಕ್ರೆಯ ಸಂಪತ್‌ರನ್ನು ಕರೆಯಿಸಿ ಬೇರೆಯೇ ದಾಖಲೀಕರಣ ಮಾಡುವ ವ್ಯವಸ್ಥೆ ಮಾಡಿದೆ. ದಾಖಲೀಕರಣ ಮೂರು ಗಂಟೆ, ಹತ್ತು ನಿಮಿಷದವರೆಗೆ ನಡೆಯಿತು. ಮಧ್ಯಾಹ್ನ ಊಟದ ವಿರಾಮದ ಬಳಿಕ ಸಾಯಂಕಾಲ ಸುಮಾರು 4.30ಕ್ಕೆ ಮುಗಿಯಿತು.

ಮುಖ್ಯ ಗಾಯಕರಾಗಿ ರಘು ಪರವರು ಹಾಗೂ ಸಹ ಗಾಯಕಿಯಾಗಿ ವಸಂತಿ ಪರವರು ಪಾಡ್ದನ ಹಾಡಿದ್ದಾರೆ. ವಸಂತಿ ಪರವರು ತೆಂಬರೆ ಬಾರಿಸಿ ಹಾಡಿಗೆ ಗತಿ, ಲಯದ ಆವರಣ ಪ್ರಧಾನ ಮಾಡಿದ್ದಾರೆ. ಪಾಡ್ದನದ ಹೆಚ್ಚಿನ ಭಾಗಗಳನ್ನು ಇಬ್ಬರೂ ಹಾಡಿದ್ದಾರೆ. ಸುರುವಿಗೆ ರಘು ಪರವರು ಹಾಡುವುದು ನಂತರ ವಸಂತಿಯವರು. ನೇಮ / ಕೋಲದ ಸಂದರ್ಭದಲ್ಲಿ ಪಾಡ್ದನವನ್ನು ಇದೇ ರೀತಿ ಹಾಡುವ ಪದ್ಧತಿಯಿದೆ.

ಪಾಡ್ದನದ ಪ್ರಾರಂಭ 'ಡೆನನ್ನಾ ಡೆನ್ನಾ ಡೆನ್ನಾ ಡೆನ್ನಾ' ಪದ ಸಮುಚ್ಚಯದಿಂದ ಆಗುತ್ತದೆ. ಈ ಪದ ಸಮುಚ್ಚಯವನ್ನು ವೃತ್ತಿಪರ ಪಾಡ್ದನ ಗಾಯಕರು ಬೇರೆ ಬೇರೆ ರೀತಿಯಲ್ಲಿ ಹಾಡುತ್ತಾರೆ. 'ಡೆನನ್ನಾ ಡೆನ್ನಾ ಡೆನ್ನಾ ಡೆನ್ನಾ' ನಾಂದಿಯಾಗಿ ಮುಂದೆ ಹಾಡುವ ಪಾಡ್ದನದ ಸಾಲುಗಳನ್ನು ಹೇಗೆ ಹಾಡಲಾಗುವುದೆಂಬ ಸೂಚನೆ ಒದಗಿಸಿಕೊಡುತ್ತದೆ.

ಗಾಯಕರು ನಿರ್ದಿಷ್ಟ ಪಾಡ್ದನದ ಸಾಲುಗಳನ್ನು ಹಾಡಿ ಇಬ್ಬರು ಒಟ್ಟಿಗೆ ದೀರ್ಘ ಸ್ವರದಲ್ಲಿ 'ಹಾಂ ಯೇ ಯೇ ಯೇ ಯೇ ಯೇ ಯೇ ಹಾಂ' ಹಾಡುತ್ತಾರೆ.

ಸಹ ಗಾಯಕ :

(1) ಮುಖ್ಯಗಾಯಕ ಹಾಡಿದ ಸಾಲುಗಳನ್ನು ಯಾವ ಬದಲಾವಣೆಯಿಲ್ಲದೆ ಪುನರುಕ್ತಿ ಮಾಡಬಹುದು (2) ಮುಖ್ಯಗಾಯಕ ಹಾಡಿದ ಸಾಲುಗಳ ಕೆಲವು ಪದಗಳ ಅರ್ಥ ಕೊಡುವ ಪೂರಕ ಪದ ಉಪಯೋಗಿಸಿ ಹಾಡಬಹುದು (3) ಮುಖ್ಯಗಾಯಕ ಹಾಡಿದ ಸಾಲುಗಳನ್ನು ಸಂಕ್ಷೇಪವಾಗಿ ಹಾಡಬಹುದು 4) ಪಾಡ್ದನಕ್ಕೆ ಹೊಸ ತಿರುವು ಕೊಡಬಹುದು 5) ಕೆಲವೊಮ್ಮೆ ಎರಡು ಗಾಯಕರು ಹಾಡಿದ ಪಾಡ್ದನದ ಸಾಲುಗಳು ಬೇರೇಯೇ ಆಗಿರಬಹುದು.

ಪ್ರಸ್ತುತ ಪಾಡ್ದನ ಸಂಗ್ರಹದಲ್ಲಿ ಹೆಚ್ಚಿನ ಕಡೆ ರಘು ಪರವ ಮತ್ತು ವಸಂತಿ ಪರವ ಒಟ್ಟಿಗೆ ಹಾಡಿದ್ದಾರೆ. ಪಾಡ್ದನದ ಕೊನೆಯ ಭಾಗದಲ್ಲಿ ರಘು ಪರವ ಒಬ್ಬರೇ

ವೇಗ ಗತಿಯಲ್ಲಿ ಹಾಡಿದ್ದಾರೆ. ವಸಂತಿ ಪರವತೆಂಬರೆ ಬಾರಿಸಿ ಹಿನ್ನಲೆ ಸಂಗೀತ ಕೊಟ್ಟಿದ್ದಾರೆ.

ಕೋಲ / ನೇಮ :

ತುಳುವರು ಆರಾಧಿಸುವ ದೈವ / ಬೂತ (ತುಳು)ಗಳ ಉತ್ಸವಕ್ಕೆ ಸಾಮಾನ್ಯವಾಗಿ ಉಪಯೋಗಿಸುವ ಶಬ್ದ 'ಕೋಲ': ಬೈದೆರ್ಲೆ ಕೋಲ, ಮುಗ್ಗೆರ್ಲೆ ಕೋಲ, ಪಂಜುರ್ಲಿ ಕೋಲ, ಬೊಬ್ಬರ್ಯ ಕೋಲ, ಕಲ್ಕುಡ ಕೋಲ, ಮೈಯಂದಾಲ ಕೋಲ ಇತ್ಯಾದಿ. ಆದರೆ ಉತ್ಸವದ ಆಮಂತ್ರಣ ಪತ್ರಿಕೆ ಅಚ್ಚು ಮಾಡುವಾಗ 'ನೇಮ' ಶಬ್ದದ ಪ್ರಯೋಗ ಮಾಡುವ ಪರಂಪರ ನಡೆದು ಬಂದಿದೆ. ಪ್ರಾಯಶಃ ಇದು ಕನ್ನಡ ಭಾಷೆಯ ಪ್ರಭಾವವಿರಬೇಕು. 'ಕೋಲ' ತುಳು ಶಬ್ದ; ನೇಮ, ಸಂಸ್ಕೃತದ 'ನಿಯಮ'ದಿಂದ ಬಂದ ಶಬ್ದ.

ಭೂತಾರಾಧನೆಯ ಉತ್ಸವವನ್ನು ಕೂಲಾಂಕಷ ಅಧ್ಯಯನ ಮಾಡಿದಾಗ ಕೋಲ ಮತ್ತು ನೇಮದಲ್ಲಿ ವ್ಯತ್ತಾಸವೇನೂ ಕಂಡುಬರುವುದಿಲ್ಲ. ಬೇರೆಬೇರೆ ದೈವಗಳ 'ಕೋಲ' ದಲ್ಲಿ ವ್ಯತ್ಯಾಸವಿರುತ್ತದೆ. ಆದರೆ ಎಲ್ಲಾ 'ಕೋಲ'ದಲ್ಲಿ ದೈವದ ವೇಷಾಧಾರಿಗಳಾಗಿ 'ಗಗ್ಗರ' (ಕಾಲ್ಗಡಗ) ಕಟ್ಟಿಕೊಂಡು 'ತೆಂಬರೆ' (ಸಣ್ಣ ಡೋಲು) ಬಾರಿಸಿ ಪಾಡ್ದನ ಹಾಡುವವರು ಕುಣಿಯುವವರು ವೃತ್ತಿಪರ ಪರವ, ಪಂಬದ, ಪಾಣಾರ, ನಲ್ಕೆ ಜನಾಂಗದವರು ಮಾತ್ರ.

ತುಳುವ ದೈವಗಳ ಪೂಜೆ ತುಳುವ ಅರ್ಚಕರಿಂದ ಆಗುತ್ತಿತ್ತು. ಒಂದು ಕಾಲದಲ್ಲಿ ವೈದಿಕ ಮಂತ್ರತಂತ್ರ ವಿಧಿ ವಿಧಾನ 'ಬೂತ'ಗಳಿಗೆ ಇರಲಿಲ್ಲ. ಈಗ ಜುಮಾದಿ ದೈವವನ್ನು ಧೂಮಾವತಿಯೆಂದೂ, ಬೆರ್ಮೆರ್ ದೈವವನ್ನು ಬ್ರಹ್ಮನೆಂದೂ, ಲೆಕ್ಕೆಸಿರಿ ದೈವವನ್ನು ರಕ್ತೇಶ್ವರಿಯೆಂದೂ, ಕೋಲವನ್ನು ನೇಮವೆಂದೂ ಕರೆಯುವ ಪರಂಪರೆ ನಡೆದು ಬಂದಿದೆ. ತುಳುವರ ತುಂಬಾ ಸರಳ ಪೂಜಾ ಪದ್ಧತಿ 'ಸುತ್ತಿಗೆ'ಯಿಡುವುದನ್ನು ಕಡೆಗಣಿಸಿ 'ಬ್ರಹ್ಮ ಕಲಶ'ದ ಮೊರೆ ಹೋಗುವ ಕಾಲವಿದು.

ಕೋಟಿಚೆನ್ನಯ ಪಾಡ್ದನ ತುಳು ಸಂಸ್ಕೃತಿಯ ಭಂಡಾರ :

ಕೋಟಿ ಚೆನ್ನಯ ಪಾಡ್ದನ ತುಳು ಸಂಸ್ಕೃತಿಯ... ಭಂಡಾರವೆಂದು ಹೇಳಬಹುದು. ತುಳುನಾಡು ಕೃಷಿಮೂಲ ಪ್ರದೇಶ. ಇಲ್ಲಿಯ ಜಾನಪದ ಕೃಷಿ ಜೀವನವನ್ನು ಪ್ರತಿಬಿಂಬಿಸುತ್ತದೆ. ಬುದ್ಯಂತ ಮತ್ತು ಕೋಟಿ ಚೆನ್ನಯರ ಜಗಳ ಸಾಗುವಳಿಗೆ ಸಂಬಂಧ ಪಟ್ಟದ್ದು. 'ಏಕಸಾಲೇರ್ ಸಂದಿ'ಯಲ್ಲಿ ಗತಕಾಲದ ತುಳುವ ಮದುವೆಯ ಸಂಪೂರ್ಣ ಚಿತ್ರಣ ಸಿಗುತ್ತದೆ. 'ಕೇಂಜವ ಪಕ್ಕಿಲೆ' ಸಂದಿ ತುಳುವ ಕುಟುಂಬ ಜೀವನವನ್ನು ಬಹಳ ಸುಂದರವಾಗಿ ವರ್ಣಿಸುತ್ತದೆ. ಮೀನು ಹಿಡಿಯುವುದು, ಬೇಟೆಗೆ ಹೋಗುವುದು,

ನಾಗ ದೈವಕ್ಕೆ 'ತನುತಂಬಿಲ' ಅರ್ಪಿಸುವುದು, ರೋಗರುಜಿನಗಳ ಗಿಡಮೂಲಿಕೆಯಿಂದ ಉಪಚಾರ–ಇವೆಲ್ಲವನ್ನು 'ಬಲ್ಲಾಲೆರೆ ಸಂದಿ'ಯಲ್ಲಿ ವಿವರಿಸಲಾಗಿದೆ.

ರಘು ಮತ್ತು ವಸಂತಿ ಪರವ ದಂಪತಿಗಳ ಕಿರು ಪರಿಚಯ :

ಪರವ ದಂಪತಿಗಳು 15–10–2017ರಲ್ಲಿ ಬೆಳಿಗ್ಗೆ ನಮ್ಮ ಮನೆಗೆ ಬಂದಾಗ ರಘು ಪರವರಲ್ಲಿ ಅವರ ಜೀವನದ ಬಗ್ಗೆ ಕೆಲವು ಪ್ರಶ್ನೆ ಕೇಳಿದೆ. ಅವರ ಉತ್ತರ ಹೇಗಿದೆ:

'ನಾನು ಹುಟ್ಟಿದ್ದು ಕಡ್ತಲ ಗ್ರಾಮದಲ್ಲಿ (ಹೆಬ್ರಿ ತಾಲೂಕು, ಉಡುಪಿ ಜಿಲ್ಲೆ). ನನ್ನ ತಂದೆ ಕೋಲ ಕಟ್ಟುತ್ತಿದ್ದರು. ಆದರೆ ಅವರು ತನ್ನ ಮಕ್ಕಳಿಗೆ ಕೋಲ ಕಟ್ಟುವ ಕೌಶಲ್ಯ ಕಲಿಸಲಿಲ್ಲ. ಹನ್ನೊಂದು ವರ್ಷ ಪ್ರಾಯವಾಗುವ ತನಕ ಒಬ್ಬ ಅಧ್ಯಾಪಕರ ಮನೆಯಲ್ಲಿ ದನ ಕಾಯುವ ಕೆಲಸ ಮಾಡಿದೆ. ಸಂಬಳ ಮೂರು ಸೇರು ಅಕ್ಕಿ. ಮುಂದೆ ಸಾಂಗ್ಲಿ (ಮಹಾರಾಷ್ಟ್ರ)ಗೆ ಹೋಗಿ ಹೋಟೆಲಿನಲ್ಲಿ ಕೆಲಸಕ್ಕೆ ಸೇರಿದೆ. ಹೋಟೆಲ್ ಮಾಲಿಕನ ಅಳಿಯನೀಗೂ ನನಗೂ ಜಗಳವಾಯಿತು. ಆ ಹೋಟೆಲಿನ ಕೆಲಸ ಬಿಟ್ಟು ಅಲ್ಲಿಯೇ ಇನ್ನೊಂದು ಹೋಟೆಲಿನಲ್ಲಿ ಕೆಲಸಕ್ಕೆ ಸೇರಿದೆ. ಮೂರು ವರ್ಷ ಕೆಲಸ ಮಾಡಿದೆ; 350 ರೂಪಾಯಿ ಸಂಬಳ. ಮುಂದೆ ಒಂದು ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡಿದೆ. ಶ್ರೀಮತಿ ಇಂದಿರಾಗಾಂಧಿಯವರ ಮರಣದ ಸಮಯ ನಾನು ಸಾಂಗ್ಲಿಯಲ್ಲಿ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದೆ. ಮತ್ತೆ ಊರಿಗೆ ಬಂದೆ. ನಾನು ಕೋಲದ ಬಗ್ಗೆ ಕಲಿತದ್ದು ನನ್ನ ಮಾವನವರಿಂದ....'

ಕಾರ್ಕಳ ತಾಲೂಕಿನ ನಕ್ರೆಯ ದಿವಂಗತ ತಬುರ ಪರವರು ಪ್ರಖ್ಯಾತ ದೈವಕಲಾವಿದರು. ಅವರ ಮಗಳು ವಸಂತಿ; ವಸಂತಿಯ ಗಂಡ ರಘು ಪರವ. ತಬುರ ಪರವ ಮತ್ತು ಅವರ ಹೆಂಡತಿ ತುಳು ಪಾಡ್ದನ ಹಾಡುವುದರಲ್ಲಿ ತುಂಬ ಹೆಸರು ಗಳಿಸಿದವರು.

'ಮಾವನವರೊಟ್ಟಿಗೆ ಕೋಲ ನೇಮಕ್ಕೆ ಹೋಗುತ್ತಿದ್ದೆ; ಇಡೀ ರಾತ್ರಿ ಕೂತುಕೊಂಡು ಮಾವನವರ ಕೋಲ ನೋಡುತ್ತಿದ್ದೆ. ಹತ್ತು ರೂಪಾಯಿ ಸಿಕ್ಕಿದರೂ ಅದು ನನ್ನ ಸಂಬಳ. ಹೀಗೆ ಕೋಲದ ಕ್ರಮ, ಪದ್ಧತಿ, ಆಚರಣೆ, ದೈವದ ಮಾತು, ಪಾಡ್ದನ– ಇವೆಲ್ಲವನ್ನೂ ಮಾವನವರಿಂದ ಕಲಿತೆ. ಮಾವನವರು ಪಾಡ್ದನ ಹೇಳುವುದನ್ನು ಕೇಳುತ್ತಿದ್ದೆ; ಹಾಗೂ ಪಾಡ್ದನ ಹಾಡುವ "ಪ್ರಾಕ್ಟಿಸ್" ಮಾಡುತ್ತಿದ್ದೆ.'

ರಘು ಪರವರಿಗೆ ನೀವು ಪಾಡ್ದನ ಹಾಡಲು ಮತ್ತು 'ನುಡಿಕಟ್ಟ್' ಕೊಡಲು ಹೇಗೆ ಕಲಿತಿರಿ ಕೇಳಿದಾಗ ಅವರ ಪ್ರತಿಕ್ರಿಯೆ :

'ಉಂದು ಮಾತ ಎಂಚಿನಗೊತ್ತುಂಡೇ, ಸಾಲೆದ ಮಾಸ್ಟ್ರೆಲೆಕ್ಕ ಪೆನ್ನ್ ಪತೊಂದು ಬರೆವುನಂಚಿತ್ತಿನ ಬೇಲೆ ಅತ್ತ್. ಬಾಯಿ ಪಟೊಟ್ಟು ಮಂಡೆಕರ್ಚಿಡ್‌ಕಲ್ಪುನ ಬೇಲೆ ಮಾತ್ರ; ಬೇತೆದಾಲತ್ತ್.' (ಇವೆಲ್ಲಾ–ಪಾಡ್ದನ ಹಾಡುವುದು, ಕೋಲ ಕಟ್ಟುವುದು–ಏನೆಂದು ನಮಗೆ ಗೊತ್ತಿದೇಯೇ? ಇದು ಶಾಲೆಯ ಉಪಾಧ್ಯಾಯರ ಹಾಗೆ ಪೆನ್ನು ಹಿಡಿದು ಬರೆಯುಂತಹ ಕೆಲಸ ಅಲ್ಲ. ಇದು ಬಾಯಿಪಾಠ ಮಾಡಿ ಬುದ್ಧಿ ಉಪಯೋಗಿಸಿ ಕಲಿಯುವ ಕೆಲಸ ಮಾತ್ರ; ಮತ್ತೆ ಬೇರೇನಲ್ಲ.'

'ಬೇರೆ ಬೇರೆ ದೈವಗಳಿಗೆ ಕೋಲ ಕಟ್ಟಿದ್ದೇನೆ : ಕೊಡಮಂತ್ತಾಯ, ಮಾಯಂದಾಲ್, ಬೈದೆರ್ಲು (ಕೋಟಿ, ಕುಜುಂಬ ಕಾಂಜ, ಚೆನ್ನಯ); ಪಂಜುರ್ಲಿ, ಜುಮಾದಿ, ಉಡಿಲ್ತಾಯ, ದುಗ್ಗಲಾಯ, ಮರ್ಲ್ ಬೂತ ಇತ್ಯಾದಿ.'

ಶ್ರೀಮತಿ ವಸಂತಿ ಪರವರು 'ತೆಂಬರೆ' ಬಾರಿಸಿ ಪಾಡ್ದನ ಹಾಡುವವರಲ್ಲಿ ನಿಪುಣರು. ತಂದೆ, ತಾಯಿಯವರಿಂದ ಈ ಕಲೆ ಕಲಿತ್ತಿದ್ದಾರೆ, ರಘು ವಸಂತಿ ದಂಪತಿಗಳಿಗೆ ಮೂರು ಮಕ್ಕಳು–ಎರಡು ಗಂಡು, ಒಂದು ಹೆಣ್ಣು. ಗಂಡು ಮಕ್ಕಳು ಕೋಲ ಕಟ್ಟುತ್ತಾರೆ; ಮಗಳಿಗೆ ಮದುವೆಯಾಗಿ ಎರಡು ಮಕ್ಕಳಿವೆ.

ಪ್ರಸ್ತುತ ಕೋಟಿ ಚೆನ್ನಯ ಪಾಡ್ದನ ಸಂಪುಟದ ಬಗ್ಗೆ :

ಈ ಸಂಪುಟದಲ್ಲಿ ಎರಡು ಭಾಗಗಳಿವೆ : ಭಾಗ ಅ ತುಳು–ಕನ್ನಡ ಭಾಗ ಮತ್ತು ಭಾಗ ಆ; ಇದರಲ್ಲಿ ಕೋಟಿ ಚೆನ್ನಯ ಪಾಡ್ದನದ ಸಾರಂಶ ಆಂಗ್ಲ ಭಾಷೆಯಲ್ಲಿದೆ.

ಈಗಿನ ಕಾಲದಲ್ಲಿ ಪಾಡ್ದನದ ಧ್ವನಿ ಮುದ್ರಣ ಅಥವಾ ವಿಡಿಯೋ ಮಾಡುವುದು ಸುಲಭದ ಕೆಲಸ. ರೆಕೋರ್ಡ್ ಮಾಡಿದ ಪಾಡ್ದನವನ್ನು ಬರೆಯುವುದು, ಗ್ರಂಥಸ್ಥ ಮಾಡುವುದು; ಸ್ವಲ್ಪ ಕಷ್ಟ. ವೃತ್ತಿಪರ ಪಾಡ್ದನ ಗಾಯಕರು / ಭೂತ ನರ್ತಕರು ಪಾಡ್ದನ ಹೇಳುವಾಗ ಪದಗಳನ್ನು ದೀರ್ಘ ಎಳೆದು ಹಾಡುತ್ತಾರೆ. ಆದ್ದರಿಂದ ಪದಗಳ ಉಚ್ಚಾರಣೆ ಸರಿಯಾಗಿ ಗೊತ್ತಾಗುವುದಿಲ್ಲ. ಉಚ್ಚಾರಣೆ ಗೊತ್ತಾಗದೆ ಅರ್ಥ ಹುಡುಕುವುದು ಕಷ್ಟ. ಒಂದು ಪಾಡ್ದನದ ಸಾಲನ್ನು ಹಲವಾರು ಬಾರಿ ಕೇಳಿದರೆ ಯಾವ ಪದ ಉಪಯೋಗಿಸಲಾಗಿದೆಯೆಂದು ತಿಳಿಯಲು ಸ್ವಲ್ಪ ಸುಲಭವಾಗುತ್ತದೆ. ಅಲ್ಲದೆ ಪಾಡ್ದನ ಗಾಯಕರು ಒಂದೇ ಪದವನ್ನು ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ರೀತಿಯಲ್ಲಿ ಉಚ್ಚರಿಸಿ ಹಾಡುತ್ತಾರೆ. ಪಾಡ್ದನದಲ್ಲಿ ಬರುವ ಕೆಲವು ಶಬ್ದಗಳು ಈಗ ಬಳಕೆಯಲ್ಲಿಲ್ಲ. ಆದ್ದರಿಂದ ಪಾಡ್ದನ ಕೇಳುವಾಗ ತುಂಬಾ ಆನಂದದ ಅನುಭವವಾಗುತ್ತದೆ; ಆದರೆ ಪಾಡ್ದನವನ್ನು ಗ್ರಂಥಸ್ಥ ಮಾಡುವುದು ಅಷ್ಟೇ ಕಷ್ಟ.

ಕೋಟಿ ಚೆನ್ನಯ ಪಾಡ್ದನವೊಂದು ದೀರ್ಘ ಕಥನಕಾವ್ಯ. ಅದರಲ್ಲಿ ಬೇರೆ ಬೇರೆ ಪ್ರಾಸಂಗಿಕ ಕಥೆಗಳಿವೆ; ಪ್ರತೀ ಅಡ್ಡಕಥೆಗೆ ಸಂಬಂಧಪಟ್ಟ ಪಾಡ್ದನದ ಭಾಗವನ್ನು 'ಸಂದಿ' ಅಥವಾ 'ಬೀರ'ವೆಂದು ಹೇಳುತ್ತಾರೆ: ಬೆರ್ಮೆರೆ ಸಂದಿ, ಬಲ್ಲಾಲೆರೆ ಸಂದಿ, ಕೇಂಜವ ಪಕ್ಕಿಲೆ ಸಂದಿ ಇತ್ಯಾದಿ. ಈ ಸಂಪುಟದಲ್ಲಿಯೂ ಅದೇ ಮಾದರಿಯನ್ನು ಅಳವಡಿಸಲಾಗಿದೆ.

ಪಾಡ್ದನದ ಕನ್ನಡ ಅನುವಾದ ನೀಡಲಾಗಿದೆ. ಸಾಂಸ್ಕೃತಿಕ ಪದಕೋಶ ಕೊಡಲಾಗಿದೆ.

ಸೋಲು ಬುಡುದು ಸೊಲ್ಮೆ :

ಕಾರ್ಕಳ ಕ್ಷೇತ್ರದ ಶಾಸಕ ಹಾಗೂ ಕರ್ನಾಟಕ ಸರಕಾರದ ಮಂತ್ರಿ ಶ್ರೀ ಸುನಿಲ್‌ಕುಮಾರರಿಗೆ ಆಭಾರಿಯಾಗಿದ್ದೇನೆ.

ಈ ಪುಸ್ತಕದ ಪ್ರಕಟಣೆಗೆ ಮುಲ್ಕಿ-ಮೂಡಬಿದ್ರೆ ಕ್ಷೇತ್ರದ ಶಾಸಕ ಶ್ರೀ ಉಮನಾಥ ಕೋಟ್ಯಾನವರ ಮಾಡಿದ ಉಪಕಾರಕ್ಕೆ ನಾನು ಋಣಿಯಾಗಿದ್ದೇನೆ.

ಕರಡು ಪ್ರತಿಯನ್ನು ಕೂಲಂಕಷವಾಗಿ ಓದಿ, ಉಪಯಕ್ತ ಸಲಹೆ ನೀಡಿದ್ದಾರೆ, ಡಾ.ಎನ್.ಟಿ. ಭಟ್ಟ್, ಲೇಖಕ, ನಿವೃತ್ತ ಪ್ರಾಧ್ಯಾಪಕ, ಎಮ್.ಜಿ.ಎಮ್. ಕಾಲೇಜು, ಉಡುಪಿ.. ಅವರಿಗೆ ತುಂಬಾ ವಂದನೆಗಳು ಹಾಗೂ ಕೃತಜ್ಞತೆಗಳು.

ಈ ಸಂಪುಟ ಗ್ರಂಥಸ್ಥ ಮಾಡುವಾಗ, ಶ್ರೀ ದಾಮೋದರ ಕಲ್ಮಾಡಿಯವರ ಕೋಟಿ ಚೆನ್ನಯ ಪಾರ್ದನ ಸಂಪುಟ, ಡಾ. ವಾಮನ ನಂದಾವರರ ಕೋಟಿ ಚೆನ್ನಯ- ಜಾನಪದೀಯ ಅಧ್ಯಯನ, ಬನ್ನಂಜೆ ಬಾಬು ಅಮೀನ್- ಮೋಹನ್‌ಕೋಟ್ಯಾನರ ತುಳುನಾಡ ಗರೋಡಿಗಳ ಸಾಂಸ್ಕೃತಿಕ ಅಧ್ಯಯನ, ಹಾಗೂ ಡಾ.ಯು.ಪಿ. ಉಪಾಧ್ಯಾಯರ ನೇತೃತ್ವದಲ್ಲಿ ಸಂಗ್ರಹಿಸಿದ ತುಳು ನಿಘಂಟು (ಸಂಪುಟ 1-6), ತುಂಬಾ ಉಪಯುಕ್ತವಾಗಿವೆ. ಅವರಿಗೆ ಹೃತ್ಪೂರ್ವಕ ವಂದನೆಗಳು.

ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ರಾಮಕೃಷ್ಣನಗರ ಮೈಸೂರಿನ ರವೀಂದ್ರ ಜೋಶಿ ಸೀರಿಸಿನ ಶ್ರೀ ರವಿಂದ್ರ ಜೋಶಿ ಮತ್ತು ಅವರ ಸಹೋದ್ಯೋಗಿಗಳಿಗೆ ಅಪಾರ ವಂದನೆಗಳು.

ರಘು ಮತ್ತು ವಸಂತಿ ಪರವ ದಂಪತಿಗಳಿಗೆ ನನ್ನ ಮನಃಪೋರ್ವಕ ಕೃತಜ್ಞತೆಗಳು. ಪುಸ್ತಕವನ್ನು ಪ್ರಕಟಣೆಗೆ ತಂದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಗೆ, ಅಕಾಡೆಮಿಯ ಅಧ್ಯಕ್ಷ, ಶ್ರೀ ದಾಮೋದರ ಜಿ. ಕತ್ತಲ್ ಸಾರರಗೆ, ಅಕಾಡೆಮಿಯ ಸದಸ್ಯರಿಗೆ ನನ್ನ ವಂದನೆಗಳು.

ಮಿರಾಮಾರ್ ಶಂಕರ ನಾರಾಯಣ ದೂಜ ಪೂಜಾರಿ

ಗೋವ : 10-10-2022

ಪರಿವಿಡಿ

ಭಾಗ – ಅ

ಸಂಪಾದಕನ ಮಾತು
ಪ್ರಸ್ತಾವನೆ 1
ಅಧ್ಯಾಯ 1 ಬೆರ್ಮೆರೆ ಸಂದಿ 6
ಅಧ್ಯಾಯ 2 ಏಕನ / ಏಕಡ ಸಾಲೇರೆ ಸಂದಿ 23
ಅಧ್ಯಾಯ 3 ಕೇಂಜವ ಪಕ್ಕಿಲೆ ಸಂದಿ 51
ಅಧ್ಯಾಯ 4 ದೇಯಿ ಬೈದೆದಿ ಸಂದಿ 79
ಅಧ್ಯಾಯ 5 ಬಲ್ಲಾಲೆರೆ ಸಂದಿ 99
ಅಧ್ಯಾಯ 6 ಬಂಟೆರೆ ಸಂದಿ 172
ಅಧ್ಯಾಯ 7 ಬುದ್ಯಂತ ಬೀರ 208
ಅಧ್ಯಾಯ 8 ಅಂತ್ಯ 237

ಭಾಗ – ಆ

ಕೋಟಿ ಚೆನ್ನಯ ಪಾಡ್ದನದ ಸಾರಾಂಶ ಆಂಗ್ಲ ಭಾಷೆಯಲ್ಲಿ 261

ಭಾಗ – ಇ

ಸಾಂಸ್ಕೃತಿಕ ಪದಕೋಶ
ಪರಾಮರ್ಶನ ಸಾಹಿತ್ಯ
ಫೋಟೋ

ಭಾಗ - ಅ

ಪ್ರಸ್ತಾವನೆ

ಕೋಟಿ ಚೆನ್ನಯ ಐತಿಹ್ಯ :

ಕೋಟಿ ಚೆನ್ನಯ ಐತಿಹ್ಯದ ಬಗ್ಗೆ ಸಾಕಷ್ಟು ಸಾಹಿತ್ಯ ರಚನೆ ಆಗಿದೆ. ಕೋಟಿ ಚೆನ್ನಯ ಐತಿಹ್ಯದ ವಿಷಯ ಪ್ರಾಯಶಃ ಪ್ರಥಮ ಮಹಾಪ್ರಬಂಧ ಬರೆದವರು ಡಾ. ವಾಮನ ನಂದಾವರರು (2001). ಅವರ ಗ್ರಂಥ ಕೋಟಿ ಚೆನ್ನಯ-ಜಾನಪದೀಯ ಅಧ್ಯಯನದಲ್ಲಿ ಕೋಟಿ ಚೆನ್ನಯರ ಮೇಲೆ ರಚಿಸಿದ ಸಾಹಿತ್ಯದ ಸಂಕ್ಷಿಪ್ತ ವಿವರಣೆಯಿದೆ (ಪು. 25-37).

ಕೋಟಿ ಚೆನ್ನಯರ ಜೀವನ ಚರಿತ್ರೆಗೆ ಆಧಾರ ಕೋಟಿ ಚೆನ್ನಯ ಪಾಡ್ದನ. ಕೋಟಿ ಚೆನ್ನಯರ ಜೀವನವನ್ನು ಕಥಾವಸ್ತುವಾಗಿ ರಚಿಸಿದ ಕೃತಿಗಳು ಹಲವಾರು; ಆದರೂ ಕೋಟಿ ಚೆನ್ನಯ ಪಾಡ್ದನವನ್ನು ಸಂಗ್ರಹಿಸಿ ಗ್ರಂಥಸ್ಥ ಮಾಡಿದ ಪ್ರಯತ್ನಗಳು ಬಹಳ ವಿರಳ. ಬೇರೆ ಬೇರೆ ಸಂಶೋಧನಾ ಸಂಸ್ಥೆಗಳು / ಸಂಶೋಧಕರು ಕೋಟಿ ಚೆನ್ನಯ ಪಾಡ್ದನ ಸಂಗ್ರಹಿದ್ದಾರೆ: ಶ್ರೀ ಬ್ರಹ್ಮ ಬೈದರ್ಕಳ ಸಾಂಸ್ಕೃತಿಕ ಅಧ್ಯಯನ ಪ್ರತಿಷ್ಠಾನ, ಆದಿ ಉಡುಪಿ; ರಾಷ್ಟ್ರಕವಿ ಗೋವಿನದ ಪೈ ಸಂಶೋಧನ ಕೇಂದ್ರ, ಉಡುಪಿ; ಮತ್ತು ಪ್ರೊಫೆಸರ್ ಲೋರಿ ಹೋಂಕೋ ಅವರ ಲೋರಿ ಹೋಂಕೋ ಓರಲ್ ಎಪಿಕ್ ಪ್ರೊಜೆಕ್ಟ್ ಸಂದರ್ಭದಲ್ಲಿ. ಆದರೆ ಹೀಗೆ ಸಂಗ್ರಹಿಸಿದ ಕೋಟಿ ಚೆನ್ನಯ ಪಾಡ್ದನ ಗ್ರಂಥಸ್ಥವಾಗಲಿಲ್ಲ.

ಶ್ರೀ ದಾಮೋದರ ಕಲ್ಮಾಡಿಯವರು ಸಂಪಾದಿಸಿದ ಕೋಟಿ ಚೆನ್ನಯ ಪಾಡ್ದನ ಸಂಪುಟ (2002) ಪ್ರಥಮ ಸಮಗ್ರ ಕೋಟಿ ಚೆನ್ನಯ ಪಾಡ್ದನ.

ಡಾ. ವಾಮನ ನಂದಾವರ ಪ್ರಕಾರ ಅರ್ನೋಲ್ಡ್ ಬಾಕೆಯವರು (1938) ಮೊತ್ತ ಮೊದಲಿಗೆ ಕೋಟಿ ಚೆನ್ನಯ ಪಾಡ್ದನದ ಧ್ವನಿ ಮುದ್ರಣ (2001: 26)

ಎ.ಸಿ. ಬರ್ನಾಲರ ಹಸ್ತಪ್ರತಿಗಳು :

ತುಳು ಪಾಡ್ದನಗಳ ಸಂಗ್ರಹ ಹಾಗೂ ಅಧ್ಯಯನ ಹತ್ತೊಂಬತ್ತನೇ ಶತಕದ ಉತ್ತರಾರ್ಧದಲ್ಲಿ ಆರಂಭವಾಯಿತೆಂದು ಹೇಳಬಹುದು. ವಿದೇಶಿ ವಿದ್ವಾಂಸರು, ಬಾಸೆಲ್ ಮಿಶನಿನ ಪ್ರಚಾರಕರು ಈ ಪರಂಪರೆಯನ್ನು ಸುರು ಮಾಡಿದರು.

ಎ.ಸಿ. ಬರ್ನೆಲ್ (ಆರ್‌ತರ್ ಕೋಕ್ ಬರ್ನೆಲ್, 1840–82) ಐಸಿಎಸ್ ಅಧಿಕಾರಿಯಾಗಿದ್ದು ಮಂಗಳೂರಿನಲ್ಲಿ 1872–4ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾನ್ಯಾಯಾಧೀಶರಾಗಿದ್ದರು. ಅವರಿಗೆ ತುಳು ಜಾನಪದದ ವಿಷಯ ತುಂಬಾ ಅಭಿರುಚಿ. ಹಾಗೂ ಅವರು ಅಪೂರ್ವ ವಿದ್ವಾಂಸರಾಗಿದ್ದರು, ಸಂಸ್ಕೃತದ 350 ಹಸ್ತಪ್ರತಿಗಳನ್ನು ಸಂಗ್ರಹಿಸಿ ಇಂಡಿಯ ಆಫೀಸ್ ಲೈಬ್ರೆರಿಗೆ ಕಳುಹಿಸಿಕೊಟ್ಟಿದ್ದರು.

ಅವರು ಹಲವಾರು ಪಾಡ್ದನಗಳನ್ನು ಸಂಗ್ರಹಿಸಿ, ಆಂಗ್ಲ ಭಾಷೆಗೆ ಅನುವಾದ ಮಾಡಿದರು ಅಥವಾ ಮಾಡಿಸಿದರು. ಪಾಡ್ದನಗಳ ಮೂಲ ಮತ್ತು ಪಾಡ್ದನಗಳ ಅನುವಾದದ ಕರಡು ಪ್ರತಿಗಳನ್ನು ಒಟ್ಟಿಗೆ ಕಟ್ಟಿ ಒಂದು ಖಾಲಿ ಪುಟದಲ್ಲಿ ಗ್ರಂಥಕ್ಕೆ ದ ಡೆವಿಲ್ ವರ್ಶಿಪ್ಪ್ ಓಫ್ ದ ತುಳುವಾಸ್ ಶೀರ್ಷಿಕೆ ಕೊಟ್ಟು ತಮ್ಮ ವಾಚನಾಲಯದಲ್ಲಿ ಇಟ್ಟಿದ್ದರು. ಅವರು 1882ರಲ್ಲಿ ದೈವಾಧೀನರಾದರು. ಅವರ ವಾಚನಾಲಯದ ಪುಸ್ತಕಗಳನ್ನು 1883ಯಲ್ಲಿ ಸ್ಥಳಾಂತರ ಮಾಡುವಾಗ ಹಸ್ತಪ್ರತಿಗಳ ಕಟ್ಟು ಕ್ವರಿಟ್ಚ್ ಎಂಬವರಿಗೆ ಸಿಕ್ಕಿತು. ಅವರು ಅದನ್ನು ಮೇಜರ್ ಆರ್.ಸಿ. ಟೆಂಪ್ಲ್ ಅವರಿಗೆ ಕೊಟ್ಟರು.

ಆರ್.ಸಿ. ಟೆಂಪ್ಲ್. ಎ.ಸಿ. ಬರ್ನೆಲರ ಮಿತ್ರರಾಗಿದ್ದರು. ಟೆಂಪ್ಲ್ ದಿ ಇಂಡ್ಯನ್ ಆಂಟಿಕ್ವೆರಿ (ಭಾರತೀಯ ಪ್ರಾಚೀನ ಸಂಸ್ಕೃತಿಯ ಅಧ್ಯಯನ) ಎಂಬ ನಿಯತಕಾಲಿಕ ಪತ್ರಿಕೆಯ ಸಂಪಾದಕರಾಗಿದ್ದರು. ಅವರು ಹಸ್ತಪ್ರತಿಗಳ ಕಟ್ಟನ್ನು ಬಿಚ್ಚಿ ನೋಡಿದಾಗ ಕಟ್ಟಿನಲ್ಲಿ ಎರಡೂ ಬದಿಗಳಲ್ಲಿ ಬರೆದ 325 ಕಾಗದ ಹಾಳೆಗಳ 650 ಪುಟ ಪಾಡ್ದನಗಳ ಮೂಲ, ಅವುಗಳ ಆಂಗ್ಲ ಅನುವಾದದ ಹಸ್ತಪ್ರತಿಗಳು ಸಿಕ್ಕಿದವು. ಹಸ್ತಪ್ರತಿಗಳ ಕಟ್ಟಿನ ಹೊರ ಹಾಳೆಯ ಚೀಟಿಯಲ್ಲಿ ಬರ್ನೆಲ್ ಹೀಗೆ ಬರೆದು ಇಟ್ಟಿದ್ದರು :

'ಇದರಲ್ಲಿ ದಕ್ಷಿಣ ಕನ್ನಡದಲ್ಲಿ ಭೂತ ಉತ್ಸವ ಸಂದರ್ಭದಲ್ಲಿ ಪಂಬದ ಅಥವಾ ಪೂಜಾರಿಗಳು ಹಾಡುವ ತುಳು ಮಂತ್ರ ರಚನೆಗಳಿವೆ. ಮೊದಲಿನ 5 ಮಂತ್ರ ರಚನೆಗಳನ್ನು ಡಾ. ಮೋಗ್ಲಿಂಗ್ ಅವರ ಸಂಗ್ರಹದಿಂದ, ನಂತರದ 5 ರಚನೆಗಳನ್ನು ಒಬ್ಬ ತಂತ್ರಿ (ತುಳು ಬ್ರಾಹ್ಮಣ) ನನಗಾಗಿ ಮಂಗಳೂರು ತಹಶೀಲ್ದಾರರ ಕಚೇರಿಯಲ್ಲಿ ಬರೆದುಕೊಟ್ಟ, ಉಳಿದ ಕೆಲವು ಮಂತ್ರಗಳನ್ನು ನಾನು ಕಳುಹಿಸಿದ ಜನರು ಬೇರೆ ಬೇರೆ ಕಡೆಗೆ ಹೋಗಿ ಸಂಗ್ರಹಿಸಿದ ರಚನೆಗಳಿವೆ. ಹಲವಾರು ರಚನೆಗಳನ್ನು ಕಾಂತ ಹೆಸರಿನ ದೃಷ್ಟಿಹೀನ ಪಂಬದ ಹಾಡಿದ್ದಾರೆ; ಅಲ್ಲದೆ ಈ ರಚನೆಗಳನ್ನು ಎಲ್ಲೆಲ್ಲಿ ಹಾಡುತ್ತಾರೆಂದು ಹೇಳಿದ್ದಾರೆ...'

ಬರ್ನೆಲರ ಪಾಡ್ದನದ ಕಟ್ಟಿನಲ್ಲಿ ಎರಡು ಪತ್ರಗಳಿದ್ದವು. ಪತ್ರಗಳಲ್ಲಿ ಬರ್ನೆಲ್ ಮತ್ತು ಬಾಸೆಲ್ ಮಿಶನಿನ ಪ್ರಚಾರಕ ಜೊಹ್ ಹೆಸ್ಸಿ ಕಣ್ಣಾರೆ ಕಂಡ ಭೂತ ಕೋಲದ ವರ್ಣನೆಯಿದೆ. ಮಂಗಳೂರಿನ ಬಿಲ್ಲವ ಮುಖಂಡ, ಧೂಮಪ್ಪರ ಮನೆಯಲ್ಲಿ ತಾ 23-26 ಮಾರ್ಚ್ ತಿಂಗಳು; 1872ರಲ್ಲಿ ಜಾರಂದಾಯ ಮತ್ತು ಪರಿವಾರ ದೈವಗಳ ಮೂರು ದಿನಗಳ ಕೋಲ ನಡೆದಿತ್ತು. ಇದರ ಸಂಪೂರ್ಣ ವಿವರಣೆ ಬರ್ನೆಲರು ಬರೆದಿಟ್ಟ ಪತ್ರಗಳಲ್ಲಿ ಸಿಗುತ್ತದೆ. ಭೂತ ಕೋಲದ ಬಗ್ಗೆ ಆಂಗ್ಲ ಭಾಷೆಯಲ್ಲಿ ಬರೆದ ಇದು ಪ್ರಥಮ ದಾಖಲೆಯಾಗಿರಬಹುದು.

ಆರ್.ಸಿ. ಟೆಂಪ್‌ಲರು ದ್ ಡೆವಿಲ್ ವರ್ಶಿಪ್ಪ್ ಓಫ್ ದ ತುಳುವಾಸ್ ಪುಸ್ತಕಕ್ಕೆ ಬರೆದ ಮುನ್ನುಡಿ ಪ್ರಕಾರ ಬರ್ನೆಲರ ಪಾಡ್ದನದ ಕಟ್ಟಿನಲ್ಲಿ 28 ತುಳು ಪಾಡ್ದನಗಳು ಹಾಗೂ ಪಾಡ್ದನಗಳ ಆಂಗ್ಲ ಅನುವಾದದ ಹಸ್ತಪ್ರತಿಗಳಿದ್ದವು.

ರೆ|. ಎ. ಮೇನರ ಸಹಾಯ :

ಮೂರು ವರ್ಷ ಕಾಲ ಆರ್.ಸಿ. ಟೆಂಪ್‌ಲ್, ಬರ್ನೆಲರ ಹಸ್ತಪ್ರತಿಗಳನ್ನು ಹಾಗೆಯೇ ಇಟ್ಟರು. ಅವರಿಗೆ ತುಳು ಭಾಷೆ ಗೊತ್ತಿದ್ದ, ತುಳು ಸಂಸ್ಕೃತಿ ತಿಳಿದಿರುವ ವಿದ್ವಾಂಸರ ಸಹಾಯ ಬೇಕಿತ್ತು. 1886ರಲ್ಲಿ ಅವರು ಬಾಸೆಲ್ ಮಿಶನಿನ ಪ್ರಚಾರಕ ರೆ|. ಎ. ಮೇನರನ್ನು ಸಂಪರ್ಕಿಸಿ, ಬರ್ನೆಲರ ಹಸ್ತಪ್ರತಿಗಳ ಪ್ರಕಟಣೆಗೆ ಸಂಪಾದಕೀಯ ಸಹಾಯ ಕೇಳಿ, ಕೆಲವು ಪಾಡ್ದನಗಳನ್ನು ರೋಮನ್ ಲಿಪಿಯಲ್ಲಿ ಬರೆದು ಕೊಡಲು ವಿನಂತಿಸಿದರು. ಮೇನರ್ ಒಪ್ಪಿದರು. ಅವರು ಬರ್ನೆಲರ ಕರಡುಪ್ರತಿಗಳನ್ನು ತಿದ್ದಿ 1887ರಲ್ಲಿ ಟೆಂಪ್‌ಲರಿಗೆ ಹಿಂದೆ ಕಳುಹಿಸಿದರು. ಅಲ್ಲದೆ ಆರು ಪಾಡ್ದನಗಳನ್ನು ರೋಮನ್ ಲಿಪಿಯಲ್ಲಿ ಬರೆದು ಕಳುಹಿಸಿಕೊಟ್ಟರು. ಮೇನರ್ ತಾವೇ ಸಂಗ್ರಹಿಸಿದ ಎರಡು ಪಾಡ್ದನಗಳ ಆಂಗ್ಲ ಅನುವಾದಗಳನ್ನು ದ ಒರಿಜಿನ್ ಓಫ್ ದ ಬೈದೆರ್ಲು ಮತ್ತು ದಿ ಒರಿಜಿನ್ ಓಫ್ ಪಂಜುರ್ಲಿ ಕೂಡಾ ಕಳುಹಿಸಿಕೊಟ್ಟರು.

ಆರ್.ಸಿ. ಟೆಂಪ್‌ಲ್ ಬರ್ನೆಲರ ಹಸ್ತಪ್ರತಿಗಳನ್ನು ತಾವು ಸಂಪಾದಿಸುತ್ತಿದ್ದ ನಿಯತಕಾಲಿಕ ಪತ್ರಿಕೆಯಲ್ಲಿ ಧಾರಾವಾಹಿಯಾಗಿ 1894-7ರಲ್ಲಿ ಪ್ರಕಟಿಸಿದರು. ಈ ಪತ್ರಿಕೆಯಲ್ಲಿ ತುಳುವ ಆರಾಧನಾ ಪದ್ಧತಿಯ ಹೊರತು ಇತರ ವಿಷಯಗಳ ಕುರಿತೂ ಲೇಖನಗಳು ಪ್ರಕಟವಾಗುತ್ತಿದ್ದವು.

ಪಾಡ್ದೊನೊಳು :

ಮೇನರ್ 1886 ರಲ್ಲಿ ಪಾಡ್ದೊನೊಳು ಎಂಬ ತುಳು ಪಾಡ್ದನ ಸಂಪುಟವನ್ನು ಬಾಸೆಲ್ ಮಿಶನಿನ ಮುದ್ರಣಾಲಯದಲ್ಲಿ ಅಚ್ಚು ಮಾಡಿಸಿದರು. ಸಂಪುಟದಲ್ಲಿ ಕನ್ನಡ ಲಿಪಿಯಲ್ಲಿ ತುಳು ಪಾಡ್ದನದ 20 ಪಾಠಗಳಿವೆ.

ಪಾಡ್ದೊನೊಳು ಸಂಪುಟವನ್ನು ಬಾಸೆಲ್ ಮಿಶನಿನ ಪ್ರಚಾಕರಲ್ಲದೆ ಬೇರೆ ಯಾರಿಗೂ ಕೊಡಬಾರದೆಂದು ಆಂಗ್ಲ ಭಾಷೆಯ ಮುನ್ನುಡಿಯಲ್ಲಿ ಬರೆದರು. ಅದೊಂದು ರಹಸ್ಯ ಗ್ರಂಥವಾಗಿತ್ತು.

ದ ಡೆವಿಲ್ ವರ್ಶಿಪ್ಪ್ ಓಫ್ ದ ತುಳುವಾಸ್ ಮತ್ತು ಪಾಡ್ದೊನೊಳು

ಎ.ಸಿ. ಬರ್ನೆಲರ ದ ಡೆವಿಲ್ ವರ್ಶಿಪ್ಪ್ ಓಫ್ ದ ತುಳುವಾಸ್

ಎ.ಸಿ. ಬರ್ನೆಲರ ಪುಸ್ತಕ ಧಾರಾವಾಹಿಯಾಗಿ ದಿ ಇಂಡ್ಯನ್ ಎಂಟಿಕ್ವರಿ ಪತ್ರಿಕೆಯಲ್ಲಿ 1994–7 ಪ್ರಕಟವಾಯಿತು

ಪ್ರಮುಖವಾಗಿ ಈ ಪುಸ್ತಕದಲ್ಲಿ :

> 28 ತುಳು ಪಾಡ್ದದನಗಳ ಆಂಗ್ಲ ಭಾಷಾಂತರಗಳಿವೆ
> ಅಲ್ಲದೆ 6 ಪಾಡ್ದನಗಳ ತುಳು ಮೂಲ ರೋಮನ್ ಲಿಪಿಯಲ್ಲಿ ಅಚ್ಚಾಗಿವೆ: 1 ಜುಮಾದಿ, 2 ಮಗ್ರಂದಾಯೆ 3 ಕಲ್ಲುಡೆ 4 ಕಲ್ಲುರ್ಟಿ 5 ತೊಡಕಿನಾರ್ 6 ಬೊಬ್ಬರ್ಯೆ,
> 28 ಆಂಗ್ಲ ತರ್ಜುಮೆಗಳಲ್ಲಿ ಆರು ಮಲಯಾಳಮ್ ಲಿಪಿಯಲ್ಲಿದ್ದ ಸಣ್ಣ ಸಣ್ಣ ಪಾಡ್ದನಗಳ ಅನುವಾದಗಳು
> ಉಳಿದ 22 ತರ್ಜುಮೆಗಳು ಕನ್ನಡ ಲಿಪಿಯಲ್ಲಿದ್ದ ತುಳು ಪಾಡ್ದನಗಳು
> 16 ತರ್ಜುಮೆಗಳ ಮೂಲ ಪಾಠಗಳನ್ನು ಕನ್ನಡ ಲಿಪಿಯಲ್ಲಿ ಮೇನರ ಪಾಡ್ದೊನೊಳು ಪುಸ್ತಕದಲ್ಲಿ ಸೇರಿಸಿದ್ದನ್ನು ಗಮನಿಸಬಹುದು.

ಬರ್ನೆಲರದ ಡೆವಿಲ್ ವರ್ಶಿಪ್ಪ್ ಓಫ್ ದ ತುಳುವಾಸ್ ಹಾಗೂ ಮೇನರ ಪಾಡ್ದೊನೊಳು ಗ್ರಂಥಗಳಲ್ಲಿ ಸಮಾನತೆ ಇರುವುದನ್ನು ನೋಡಬಹುದು.

ಬರ್ನೆಲರ ಕೃತಿಯಲ್ಲಿ ಕೋಟಿ ಚೆನ್ನಯ ತುಳು ಪಾಡ್ದನದ ಆಂಗ್ಲ ಭಾಷೆಗೆ ಭಾಷಾಂತರ ಮಾಡಿದ ಐದು ಪಾಠಗಳಿವೆ :

1 ದ ಸೋಂಗ್ ಓಫ್ ದೆವ್‌ಬೈದಿ

2 ದ ಸೋಂಗ್ ಓಫ್ ಕೋಟಿ ಚನ್ನಯ್ಯ – ಭಾಗ I

3 ದ ಸೋಂಗ್ ಓಫ್ ಕೋಟಿ ಚನ್ನಯ್ಯ – ಭಾಗ II

4 ದ ಸ್ಟೋರಿ ಓಫ್ ಕೋಟಿ ಚನ್ನಯ್ಯ

5 ಮಿಸ್ಟರ್ ಮೇನರ್ಸ್ ವ್ಯಾರಿಯಂಟ್ಸ್ ನಂ.1 : ದಿ ಒರಿಜಿನ್ ಓಫ್ ದ ಬೈದೇರ್ಲು (ಇದರ ಮೂಲ ಬರ್ನೆಲರ ಹಸ್ತಪ್ರತಿಗಳಲ್ಲಿ ಇರಲಿಲ್ಲ; ಇದು ಮೇನರ್ ಸಂಗ್ರಹಿಸಿದ ಪಾಡ್ದನ; ಅವರು ಇದರ ಆಂಗ್ಲ ಅನುವಾದ ಆರ್.ಸಿ. ಟೆಂಪ್ಲ್‌ಗೆ 1887ರಲ್ಲಿ ಕಳುಹಿಸಿಕೊಟ್ಟಿದ್ದರು. ಆರ್.ಸಿ. ಟೆಂಪ್ಲ್ ಇದನ್ನು ಬರ್ನೆಲರ ಪುಸ್ತಕದಲ್ಲಿ ಸೇರಿಸಿ ಪ್ರಕಟಿಸಿದರು.)

ಬರ್ನೆಲರ ಕೃತಿ ಕೋಟಿ ಚೆನ್ನಯ ಐತಿಹ್ಯದ ಬಗ್ಗೆ ಆಂಗ್ಲ ಭಾಷೆಯಲ್ಲಿ ಪ್ರಕಟಿಸಿದ ಪ್ರಥಮ ಕೃತಿಯೆಂದು ಹೇಳಬಹುದು. ಇದರಲ್ಲಿ ಕೋಟಿ ಚೆನ್ನಯರ ಬಗ್ಗೆ ತುಂಬಾ ವಿಸ್ತಾರ, ದೀರ್ಘ ಲೇಖನಗಳಿವೆ. ಆದ್ದರಿಂದ ಬರ್ನೆಲರ ಕಾಲದಲ್ಲೂ ಕೋಟಿ ಚೆನ್ನಯರ ಆರಾಧನೆ ತುಳುನಾಡಿನಲ್ಲಿ ವ್ಯಾಪಕವಾಗಿ ನಡೆಯುತ್ತಿತ್ತೆಂದು ಹೇಳಬಹುದು.

ಬರ್ನೆಲ್ ಮತ್ತು ಮೇನರ್ ತುಳುವರ ದೈವಾರಾಧನಾ ಪದ್ಧತಿಯ ಅಧ್ಯಯನದ ಆರಂಭ ಮಾಡಿದವರು.

ಬರ್ನೆಲರ ಕೃತಿಯಲ್ಲಿ ಸಿರಿ ಪಾಡ್ದನ ಅಥವಾ ಸಿರಿ ಕಥೆಯ ಉಲ್ಲೇಖ ಬರುವುದಿಲ್ಲ.

* * * * *

ಅಧ್ಯಾಯ - 1
ಬೆರ್ಮೆರೆ ಸಂದಿ

'ಬೆರ್ಮೆರೆ ಸಂದಿ' ಕೋಟಿ ಚೆನ್ನಯ ಪಾಡ್ದನದ ನಾಂದಿಯೆಂದು ಹೇಳಬಹುದು. ಕೋಟಿ ಚೆನ್ನಯ ಪಾಡ್ದನ ಬೆರ್ಮೆರೆ ಸಂದಿಯಿಂದ ಪ್ರಾರಂಭವಾಗುತ್ತದೆ. ಈ ಸಂದಿಯಲ್ಲಿ ಬೆರ್ಮೆರ್ ದೈವದ ಸಂಪೂರ್ಣ ವಿವರವಿದೆ; ಪರ್ಮಲೆ ಬಲ್ಲಾಳನ ಪೂರ್ವಜರ ಕಿರು ಪರಿಚಯವಿದೆ; ಹಾಗೂ ಕೋಟಿ ಚೆನ್ನಯರು ಎಲ್ಲಿ ಹುಟ್ಟಿ ಬೆಳೆದದ್ದು ತಿಳಿಯಬೇಕೆಂಬ ಆಶಯವಿದೆ.

ಬೆರ್ಮೆರ್ ದೈವ ತುಳುನಾಡಿನ ಪ್ರಮುಖ ದೈವ. 'ಬೈದೆರ್ಲೆ ಗರೋಡಿ'ಯಲ್ಲಿ, 'ಮುಗ್ಗೆರ್ಲೆ ಕಳ'ದಲ್ಲಿ ಮತ್ತು 'ಸಿರಿ ಆಲಡೆ'ಯಲ್ಲಿ ಬೆರ್ಮೆರ್ ಪ್ರಧಾನ ದೈವ. 'ಬೆರ್ಮೆರೆ ಗುಂಡ' ಗರೋಡಿಯ ಅತ್ಯಂತ ಪವಿತ್ರ ಭಾಗ. ಬೆರ್ಮೆರೆ ಗುಂಡದ ಕೆಳ ಅಂತಸ್ತಿನಲ್ಲಿ ಸ್ಥಾಪನೆ ಮಾಡಿದ ಬೆರ್ಮೆರ್ ದೈವಕ್ಕೆ ಬಿಲ್ಲವ ಪೂಜಾರಿ ಪೂಜೆ ಮಾಡುತ್ತಾನೆ.

ಮುಗ್ಗೆರ್ ದೈವ (ಮುಗ್ಗೆರ್ಲು)ಗಳ ಆರಾಧನೆಯಲ್ಲಿ ಬೆರ್ಮೆರೆ ಗುಂಡ ಮುಗ್ಗೆರ್ ದೈವಗಳ ಗುಡಿಯ ಹೊರಗೆ, ಅಂಗಣದಲ್ಲಿ ಇರುತ್ತದೆ. ಮುಗ್ಗೆರ / ಮುಗೆರ ಪೂಜಾರಿ ಪೂಜೆ ಮಾಡುತ್ತಾನೆ. ತುಳುವರು ಅವರ ಮನೆದೈಗಳ ಆಚರಣೆಯಲ್ಲಿ 'ನಾಗಬೆರ್ಮೆ' ದೈವಗಳನ್ನು ಆವಾನಿಸಿ ಪ್ರಾರ್ಥಿಸುತ್ತಾರೆ. ಕೋಟಿ ಚೆನ್ನಯ ಪಾಡ್ದನ, ಸಿರಿ ಪಾಡ್ದನ ಮತ್ತು ಮುಗ್ಗೆರೆ ಪಾಡ್ದನಗಳಲ್ಲಿ ಬೆರ್ಮೆರ್ ದೈವದ ಪಾತ್ರ ಮುಖ್ಯವಾದುದು. ಒಂದು ರೀತಿಯಲ್ಲಿ ಸಿರಿ ಪಾಡ್ದನದ ಸೂತ್ರಧಾರ ಬೆರ್ಮೆರ್ ದೈವ.

ಮುಗ್ಗೇರ ಪಾಡ್ದನದಲ್ಲಿ, ಮುಗೇರ ಜನಾಂಗದ ಎಡ್ಮೂರು ದೆಯ್ಯು ಮತ್ತು ಅವನ ಭಾವ ಕೆಲತ್ತ ಪೆರ್ನೆ 'ಬೆರ್ಮೆರೆ ಗುಂಡಿ'ಗೆ 'ಕಡು' ಹಾಕಿ ಮೀನು ಹಿಡಿಯಲು ಹೋಗುತ್ತಾರೆ. (ಕೆಲತ್ತ ಪೆರ್ನೆ ತನ್ನಿಮಾನಿಗೆಯ ಗಂಡ; ತನ್ನಿಮಾನಿಗ ಎಡ್ಮೂರು ದೆಯ್ಯುನ ತಂಗಿ.) ಅವಳಿ ಎಡ್ಮೂರು ದೆಯ್ಯು ಮತ್ತು ತನ್ನಿಮಾನಿಗ- ಇವರ ಸಾಕು ತಾಯಿ ಸೊನ್ನೆ ಸೋಯಿ ಬೈದೆದಿ. (ಕೆ. ಚಿನ್ನಪ್ಪಗೌಡ, ಸಂ:

2000 : 27–42) ನಾನು ಸಂಗ್ರಹಿಸಿದ ಮುಗ್ಗೇರ ಪಾಡ್ದನದಲ್ಲಿ ಇವರ ಸಾಕು ತಾಯಿ ದೇಯಿ ಬೈದೆದಿ. (ನಾನು ಸಂಗ್ರಹಿಸಿದ ಮುಗ್ಗೇರ ಪಾಡ್ದನದ ಭಾಗ ಯಶವಂತಿ ಎಸ್. ಸುವರ್ಣರ ಪುಸ್ತಕದಲ್ಲಿ ಸೇರಿಸಲಾಗಿದೆ. ನೋಡಿ: ಯಶವಂತಿ ಎಸ್. ಸುವರ್ಣ : 2013 : 14–15). ಸಾಕು ತಾಯಿ, ಎಡ್ಮೂರು ದೆಯ್ಯು ಮತ್ತು ಕೆಲತ್ತ ಪೆರ್ನೆರಿಗೆ ಕಟ್ಟ ಆದೇಶ ಕೊಟ್ಟಿದ್ದರು: ಎಂದೂ ಬೆರ್ಮೆರೆ 'ಗುಂಡಿ'ಯಲ್ಲಿ ಮೀನು ಹಿಡಿಯಬಾರದೆಂದು. ಆದರೆ ಅವರು ಅದೇಶ ಮೀರಿ ಮೀನು ಹಿಡಿಯಲು ಹೋದಾಗ ಬೆರ್ಮೆರ್ ದೈವ ಅವರನ್ನು ಮಾಯ ಮಾಡುತ್ತದೆ. (ಅವರು ಮುಳುಗಿ ದೈವಧೀನರಾಗುತ್ತಾರೆ.)

ಪೀಟರ್ ಜೆ. ಕ್ಲಾಸ್ ಬೆರ್ಮೆರ್ ದೈವದ ಬಗ್ಗೆ :

ಪೀಟರ್ ಜೆ. ಕ್ಲಾಸ್ ತುಳುವ ಪೂಜಾ ಪದ್ಧತಿ ಹಾಗೂ ದೈವಾರಾಧನೆಯ ಮೇಲೆ ಅಗಾಧ ವಿಶ್ಲೇಷಣೆ ಮಾಡಿದ್ದಾರೆ. ಅವರ ವಿದ್ವತ್ತುಪೂರ್ಣ ಲೇಖನಗಳು ಬೇರೇ ಬೇರೇ ಸಂಚಿಕೆಗಳಲ್ಲಿ, ಸಂಪುಟಗಳಲ್ಲಿ ಪ್ರಕಟಣೆವಾಗಿವೆ. ತುಳು ಜಾನಪದದ ಬಗ್ಗೆ ಅವರ ವಿಶ್ಲೇಷಣಾತ್ಮಕ ಲೇಖನಗಳು ತುಳು ಜಾನಪದದ ತಿರುಳನ್ನು ಅರಿಯಲು ಉಪಯುಕ್ತ.

ಪೀಟರ್ ಜೆ. ಕ್ಲಾಸ್ ಸಿರಿ, ಕೋಟಿ ಚೆನ್ನಯ, ಹಾಗೂ ಮಾಯಂದಾಲ್ ಐತಿಹ್ಯಗಳ ತುಲನಾತ್ಮಕ ಅಧ್ಯಯನ ಮಾಡಿದ್ದಾರೆ. ಅವರ ತುಳುವ ಬೆರ್ಮೆರ್ ದೈವದ ಅಧ್ಯಯನ ದಿಕ್ಸೂಚಿ. ಅವರ ಪ್ರಕಾರ (ಮೂಲ: ಅವರ ಆಂಗ್ಲ ಲೇಖನ):

1 ಪಾಡ್ದನದಲ್ಲಿಯಾಗಲಿ ದೇವಸ್ಥಾನದ ಮೂರ್ತಿಗಳಲ್ಲಾಗಲಿ ಬೆರ್ಮೆರು (ಬೆರ್ಮೆರ್) ದೈವದ ನಿರೂಪಣೆ ಈ ರೀತಿ ಸಿಗುತ್ತದೆ: ಛತ್ರದ ಕೆಳಗೆ ಖಡ್ಗ ಹಿಡಿದು ಕುದುರೆಯ ಮೇಲೆ ಕೂತು ಸವಾರಿಗೆ ಹೋಗಲು ಸಿದ್ಧವಾದ ಒಬ್ಬ ರಾಜ ಯೋಧ.

2 ಇಂತಹ ಬೆರ್ಮೆರು ದೈವದ ಚಿತ್ರಣ ತುಳುನಾಡಿನಲ್ಲಿ ಜೈನರುತುಳುನಾಡಿಗೆ ವಲಸೆ ಬರುವ ಮುಂಚೆ ಇತ್ತು.

3 ಬೆರ್ಮೆರು ದೈವ ಒಬ್ಬ ರಾಜನನ್ನು ಪ್ರತಿಬಿಂಬಿಸುತ್ತದೆ.

4 ನಾಗ-ಬ್ರಹ್ಮನ ಪರಿಕಲ್ಪನೆಯಲ್ಲಿ, ನಾಗಬ್ರಹ್ಮನ ದೇಹದ ಕೆಳಗಿನ ಭಾಗ ಸರ್ಪದ ರೂಪ; ಮೇಲಿನ ಅರ್ಧಭಾಗ ಕೈಯಲ್ಲಿ ಖಡ್ಗ ಯಾ ರಾಜದಂಡ ಹಿಡಿದ ಒಬ್ಬ ಪುರುಷನ ಚಿತ್ರಣ.

5 ಈಗಲೂ ಹಲವಾರು ಭೂತ ಸ್ಥಾನಗಳಲ್ಲಿ ಬೆರ್ಮೆರೆ ಗುಂಡ ಅಥವಾ ಬೆರ್ಮೆರೆ ಗುಡಿ ಇದೆ ಮತ್ತು ಒಬ್ಬ ಬ್ರಾಹ್ಮಣೇತರ ಅರ್ಚಕ ಪೂಜೆ ಮಾಡುತ್ತಾನೆ.

6 ನಾಗನ ಪರಿಕಲ್ಪನೆಯಲ್ಲಿ ಬೆರ್ಮೆರೆ ಒಂದು ಸಂತಾನ ಅನುಗ್ರಹಿಸುವ ದೈವ.

7 ಬೆರ್ಮೆರು ವನ್ಯವಾಸಿ ದೈವ; ಅವನ ವಾಸಸ್ಥಳ ಕಾಡು ಪ್ರದೇಶ.

8 ಬೆರ್ಮೆರು ದೈವಕ್ಕೆ ಸಾಯಿಸುವ ಗುಣ ಕೂಡಾ ಇದೆ. ಸಿರಿ ಪಾಡ್ದನದಲ್ಲಿ ಬೆರ್ಮೆರು ಸಿರಿಯ ಸಂತಾನ ಸುರು ಮತ್ತು ಅಂತ್ಯ ಮಾಡುತ್ತಾನೆ (ಪು : 6–7)

(ಪೀಟರ್ ಜೆ. ಕ್ಲಾಸ್ ಅವರ ಮೂಲ ಲೇಖನ: Oral Traditions, Royal Cults and Materials for a Reconsideration of the Caste System in South India : 1978)

ಬನ್ನಂಜೆ ಬಾಬು ಅಮೀನ್–ಮೋಹನ್ ಕೋಟ್ಯಾನ್ ಬೆರ್ಮೆರ್ ದೈವದ ಬಗ್ಗೆ:

ಬನ್ನಂಜೆ ಬಾಬು ಅಮೀನ್–ಮೋಹನ್ ಕೋಟ್ಯಾನರ ತುಳುನಾಡ ಗರೋಡಿಗಳ ಸಾಂಸ್ಕೃತಿಕ ಅಧ್ಯಯನ (1990) ತುಳು ಜಾನಪದ ಲೋಕಕ್ಕೆ ಅರ್ಪಿಸಿದ ಒಂದು ಮೌಲಿಕ ಗ್ರಂಥ. ಕೋಟಿ ಚೆನ್ನಯ ಆರಾಧನಾ ಸ್ಥಳಗಳಾದ 'ಗರೋಡಿ'ಗಳನ್ನು ಜಗತ್ತಿಗೆ ಪರಿಚಯ ಮಾಡಿಕೊಟ್ಟ ಶ್ರೇಯ ಅವರಿಗೆ ಹೋಗುತ್ತದೆ. ತುಳುನಾಡಿನಲ್ಲಿ ಮತ್ತು ತುಳುನಾಡಿನ ಹೊರಗೆ ಸ್ಥಾಪಿಸಿದ ಸಾಧಾರಣ 230 ಗರೋಡಿಗಳಿಗೆ ಭೇಟಿ ನೀಡಿ, ಗರೋಡಿಗಳಲ್ಲಿ ಆರಾಧಿಸುವ ದೈವಗಳ ಬಗ್ಗೆ, ದೈವಗಳ ಮೂರ್ತಿಗಳ ಬಗ್ಗೆ, ಅಲ್ಲಿಯ ಪೂಜಾಪದ್ಧತಿ, ಆಡಳಿತೆ, ಪೂಜೆ ಮಾಡುವ ಪೂಜಾರಿಗಳ, 'ಕೋಲ ಕಟ್ಟುವ' ಅನುವಂಶಿಕ ಪರವ 'ಭೂತ ನರ್ತಕ' ರ ಬಗ್ಗೆ ವಿಸ್ತಾರ ವಿವರಣೆ ಕೊಟ್ಟ ಕೀರ್ತಿ ಬನ್ನಂಜೆ ಬಾಬು ಅಮೀನ್–ಮೋಹನ್ ಕೋಟ್ಯಾನ್ ಮತ್ತು ಅವರ ತಂಡಕ್ಕೆ ಹೋಗುತ್ತದೆ.

ಬಾಬು ಅಮೀನ್–ಮೋಹನ್ ಕೋಟ್ಯಾನರ ಕೃತಿಯಲ್ಲಿ ಗರೋಡಿಗಳಲ್ಲಿ ಆರಾಧಿಸುವ ಬ್ರಹ್ಮದೇವರ (ಬೆರ್ಮೆರ್) ಮೂರ್ತಿಯ ಬಗ್ಗೆ ಮಹತ್ವದ ವಿವರಣೆಗಳು ಲಭ್ಯ. ಅವರ ಪ್ರಕಾರ ಕೋಟಿ ಚೆನ್ನಯ ಗರೋಡಿಗಳಲ್ಲಿ ಮೂರು ತರದ ಬೆರ್ಮೆರ್ ದೈವದ ಮೂರ್ತಿಗಳನ್ನು ನೋಡಬಹುದು: 1 ಜೈನ ಸಂಪ್ರದಾಯದ ಯಕ್ಷಬ್ರಹ್ಮನ ಮೂರ್ತಿ 2 ನಾಗಬ್ರಹ್ಮನ ಪರಿಕಲ್ಪದ ಬ್ರಹ್ಮನ ಮೂರ್ತಿ ಮತ್ತು 3 ತುಳುನಾಡಿನ ಭೂತ ಬ್ರಹ್ಮನ ಪರಿಕಲ್ಪದ ಬ್ರಹ್ಮನ ಮೂರ್ತಿ. (ಅದೇ: ಪು. ೮2–8)

ಕೋಟಿ ಚೆನ್ನಯರ ಪೂಜಾಸ್ಥಳವನ್ನು, ಗುಡಿಯನ್ನು, ದೇವಸ್ಥಾನವನ್ನು 'ಬೈದರ್ಲೆ ಗರೋಡಿ'ಯೆಂದು ಕರೆಯುತ್ತಾರೆ. ಗರೋಡಿಯಲ್ಲಿ ಆರಾಧಿಸುವ ಪ್ರಧಾನ ಶಕ್ತಿ/ದೈವ, ಬೆರ್ಮೆರ್. ಬೆರ್ಮೆರ್ ತುಳುವ ಪರಂಪರೆಯಿಂದ ಮೂಡಿ ಬಂದ ದೈವ. ಇದರ ಪೂಜೆ ಬ್ರಾಹ್ಮಣೇತರ ಅರ್ಚಕರಿಂದ ನಡೆಯುತ್ತದೆ. ಬೆರ್ಮೆರ್ ದೈವದ ಪೂಜಾ ವಿಧಿವಿಧಾನ ವೈದಿಕ ವಿಧಿವಿಧಾನದಿಂದ ಬೇರೆಯೇ. ಆದರೂ ಬೆರ್ಮೆರ್ ದೈವನ್ನು 'ಬ್ರಹ್ಮ' ಅಂತ ಕರೆಯುವ ಪರಿಪಾಠ ನಡೆದುಬಂದಿದೆ. ಕೋಟಿ ಚೆನ್ನಯ ಪಾಡ್ದನದ ಪ್ರಕಾರ ಬೆರ್ಮೆರ್ ದೈವದ ಮೂಲಸ್ಥಾನ ಆರಣ್ಯ ಪ್ರದೇಶದ 'ಕೆಮಲತ್ತ ಮಲೆ'; ಕೆಮಲತ್ತ ಬೆರ್ಮೆರ್ ಕೋಟಿ ಚೆನ್ನಯರ ಕುಟುಂಬ ದೈವ.

ಕೋಟಿ ಚೆನ್ನಯ ಪಾಡ್ದನದ ಬೆರ್ಮೆರ್ ಸಂದಿಯಲ್ಲಿ 'ನಾಗಬೆರ್ಮೆರ್' (ನಾಗಬ್ರಹ್ಮ) ದೈವದ ಪ್ರಸ್ತಾಪ ಬರುವುದಿಲ್ಲ.

ಅಮೃತ ಸೋಮೇಶ್ವರರು ಸಂಪಾದಿಸಿದ ತುಳು ಪಾಡ್ದನ ಸಂಪುಟ ದಲ್ಲಿ ಸತ್ಯನಾಪುರತ್ತ ಸಿರಿ ಪಾಡ್ದನದಲ್ಲಿ ಬೆರ್ಮೆರ್ ದೈವದ ಉಲ್ಲೇಖ ಇದೆ: ಬಡಕಾಯಿ ಲಂಕೆ ಲೋಕನಾಡ್‌ದ ಜಯವುಳ್ಳ ಬೆರ್ಮೆರ್... (ಬಡಗು ದಿಕ್ಕಿನ ಲಂಕೆ ನಾಡಿನ ಜಯ ಪ್ರಧಾನ ಮಾಡುವ ಬೆರ್ಮೆರ್...) (1997 : 154)

ಪ್ರೊಫೆಸರ್ ಎ.ವಿ. ನಾವಡ (1999) ಸಂಪಾದಿಸಿದ ಸಿರಿ ಪಾಡ್ದನದಲ್ಲಿಯೂ ಬೆರ್ಮೆರ್ ದೈವದ ಉಲ್ಲೇಖವಿದೆ: '...ಇನಿ ಬಡಕಾಯಿ ಬಾರಿ ಲೋಕ ಲಂಕೆ ನಾಡ್ ಡ್ ಗೆನಾ / ಇನಿ ದೇವೆರ್ ಬೆರ್ಮೆರ್ ಗೇನಾ (ಇವತ್ತು ಬಡಗು ದಿಕ್ಕಿನ ದೊಡ್ಡ ಲಂಕೆ ನಾಡಿನಲ್ಲಿ / ಇವತ್ತು ದೇವರು ಬೆರ್ಮೆರ್...) (ಪು : 4)

ತುಳುನಾಡಿನಲ್ಲಿ ನಾಗ ದೈವದ ಆರಾಧನೆ ಎಲ್ಲಾ ತುಳುವರು ಮಾಡುತ್ತಾರೆ. ಹೆಚ್ಚಿನ ಕಡೆಗಳಲ್ಲಿ ನಾಗ ದೈವದ ಆರಾಧನೆ ವೈದಿಕ ಪರಂಪರೆಯಲ್ಲಿ ಬ್ರಾಹ್ಮಣ ಅರ್ಚಕರಿಂದ ಜರಗುತ್ತದೆ. ಹೀಗಿರುವಾಗ ಬೆರ್ಮೆರ್ ಮತ್ತು ನಾಗ ಬೇರೆ ಬೇರೆ ದೈವಗಳೆಂಬ ಆಲೋಚನೆ ಮೂಡಿ ಬರುತ್ತದೆ. ಕೋಟಿ ಚೆನ್ನಯ ಗರೋಡಿಗಳಲ್ಲಿ ಆರಾಧಿಸುವ ಬೆರ್ಮೆರ್ ದೈವನ್ನು ನಾಗಬೆರ್ಮೆರೆಂದು ಕರೆಯುವ ವಾಡಿಕೆ ಇಲ್ಲ.

ಕೋಟಿ ಚೆನ್ನಯ ಪಾಡ್ದನದಲ್ಲಿ ಬೆರ್ಮೆರ್ :

ಬೈದರ್ಲೆ ಗರೋಡಿಗಳಲ್ಲಿ ಬೆರ್ಮೆರ್ ದೈವವನ್ನು ಯೋಧನ ರೂಪದಲ್ಲಿ ತೋರಿಸಲಾಗಿದೆ_ಕೈಯಲ್ಲಿ ಆಯುಧ, ಕುದುರೆ ಸವಾರಿ ಯೋಧ. ಆದರೆ ಕೋಟಿ

ಚೆನ್ನಯ ಪಾಡ್ದನದಲ್ಲಿ ಬೆರ್ಮೆರ್ ದೈವದ ಬೇರೆಯೇ ಚಿತ್ರಣ ಸಿಗುತ್ತದೆ. ಬೆರ್ಮೆರ್ ದೈವವೊಂದು 'ಸ್ವಯಂ-ಸೃಷ್ಟಿ' ಶಕ್ತಿಯ ರೂಪದಲ್ಲಿ ಚಿತ್ರಿಸಲಾಗಿದೆ:

ಬೆರ್ಮೆರ್ ದೈವ

ರಘು : ಡೆನನ್ನಾ ಡೆನ್ನಾ ಡೆನ್ನಾ ಡೆನ್ನಾ ಡೆನ್ನೇಯೇ ಯೇ
ಡೆನನ್ನಾ ಡೆನ್ನೇಯೇಯೇ ಡೆನ್ನಾನ
ಡೆನನ್ನಾ ಡೆನ್ನಾಯೇಯೇ ಡೆನ್ನಾ ಡೆನ್ನಾವೋ ವೋ ವೋ
ಡೆನನ್ನ ಡೆನ್ನಾನಾ ಡೆನ್ನಾನಾ ಡೆನ್ನೇಯೇಯೇ
ಡೆನ್ನಾನಾಯೇ ಡೆನ್ನಾನ ಡೆನ್ನಾ ಡೆನ್ನಾವೋವೋ ಯೇಯೇ

ರಘು-ವಸಂತಿ ಹಾಂ ಯೇಯೇಯೇಯೇ ಯೇ ಯೇ ಹಾಂ

ವಸಂತಿ ಡೆನ್ನಾ ಡೆನ್ನಾನಾ ಡೆನ್ನಾ ಡೆನ್ನೇಯೇ ಡೆನನ್ನಾವೋ ಡೆನ್ನಾನಾ
ಡೆನ್ನ ಡೆನ್ನಾನಾ ಡೆನ್ನ ಡೆನ್ನೇಯೇ ಡೆನ್ನಾವೋ
ಡೆನ್ನಾ ಡೆನ್ನಾನೇಯೇಯೇ

ವ / ರ ಹಾಂ ಯೇಯೇಯೇಯೇ ಯೇ ಯೇ ಹಾಂ

ವೃತ್ತಿಪರ ಭೂತ ನರ್ತಕರು ಕೋಲ / ನೇಮದ ಸಂದರ್ಭದಲ್ಲಿ ಪಾಡ್ದನ ಹಾಡುವಾಗ 'ತೆಂಬರೆ' ಬಾರಿಸಿ 'ಡೆನ್ನ ಡೆನ್ನಾ' ಸ್ವರಸಮುಚ್ಚಯದಿಂದ ಸುರು ಮಾಡುತ್ತಾರೆ.

ರ ಬಿರ್ಮೆರೆ ಪುಟ್ಟಿ ನಾಡ್ ಬಲತ್ತ್‌ದ್‌ಸೋ ಆ
ಬಿರ್ಮೆರೆ ಪೆರಿಯಾ ಪೋವೊಂಡು ಸಂತ್ಯಾನೊಡೇ
ಬಂಟೇರೆ ಬೈದೇರ್ಲು ಪುಟ್ಟಿನಾಡೇ ಯೇ ಯೇ
ದುಂಬೆ ದುಂಬೇದಾ ಕಾಲಾದಾ ಬಲ್ಲಾಲ್ ಪುಟ್ಟಿಯೇ
ಪುದರೇ ತೆರಿಯೋಡು ಉಲ್ಲಾಯಾವೋವೋ ಯೇ

ರ/ವ ಹಾಂ ಯೇ ಯೇ ಯೇ ಯೇ ಯೇ ಹಾಂ

ಬಂಟೇರೆ ಬೈದೇರ್ಲು : 'ಬಂಟರು' (ಯೋಧರು); ಬೈದೇರ್ಲು, ಕೋಟಿ ಚೆನ್ನಯರನ್ನು ಬೈದೇರ್ಲೆಂದು ಕರೆಯುತ್ತಾರೆ; ಅವರು 'ಬೈದ' / ಬಿಲ್ಲವ ಜನಾಂಗದ ಅವಳಿ ಯೋಧರು; 'ಬಲ್ಲಾಳ' ಒಂದು ಕಾಲದಲ್ಲಿ ತುಳುನಾಡಿನಲ್ಲಿ ರಾಜ್ಯಭಾರ ಮಾಡುತ್ತಿದ್ದ ತುಂಡರಸ; ಉಲ್ಲಾಯ : ಒಡೆಯ / ಧನಿ / ಮುಖಂಡ / ಯಜಮಾನ

(ಬಿರ್ಮೆರ್ / ಬೆರ್ಮೆರ್ ದೈವ ಹುಟ್ಟಿ ಬೆಳೆದ ದೇಶಕ್ಕೆ ಹೋಗಿ / ಬೆರ್ಮೆರ್ ದೈವದ ಮಹಿಮೆಯನ್ನು ನೋಡಿ ಸಂತೋಷ ಪಡೆಯೋಣ / ಬೈದ ಯೋಧರು ಹುಟ್ಟಿದ ನಾಡಿಗೆ ಹೋಗಿ / ಬಹಳ ಹಿಂದೆ ಹುಟ್ಟಿದ ಬಲ್ಲಾಳನ / ಹೆಸರೇನೆಂದು ತಿಳಿದುಕೊಳ್ಳಬೇಕು, ಓ ಒಡೆಯರೇ)

ಟಿಪ್ಪಣಿ : ಕೋಲ / ನೇಮದ ಸಂದರ್ಭ 'ಕೋಲ ಕಟ್ಟುನಗುಳು', ವೃತ್ತಿಪರ ಭೂತ ನರ್ತಕರು ಗ್ರಾಮದ ಮುಖಂಡರನ್ನು 'ಉಲ್ಲಾಯ'ಯೆಂದು ಸಂಬೋಧಿಸುತ್ತಾರೆ.

ವ — ಆ ಬೆರ್ಮೆರ್ ಪುಟ್ಟೀ ನಾಡೇ ಅವ್ವೋ ಪೋದೂ ದಾನೀಗೇ
ಪೋದೂ ದಾನಿಗೇ ಕೇನ್ನಗುಂಡೋ
ಬೆರ್ಮೆರೆನವ್ವೋ ಪುಟ್ಟಿಯ ನಾಡ್‌ಯಾ
ದುಂಬೇ ಕಾಲಾದ ಬಲ್ಲಾಲ್‌ಯೇ ಯೇಯೇ

ವ / ರ — ಹಾಂ ಯೇ ಯೇ ಯೇ ಯೇ ಯೇ ಹಾಂ
(ಬೆರ್ಮೆರ್ ದೈವ ಹುಟ್ಟಿದ ನಾಡಿಗೆ ಹೋಗಿ / ಹೋಗಿ ಕೇಳುವಾಗ / ಬೆರ್ಮೆರ್ ದೈವ ಹುಟ್ಟಿದ ನಾಡು / ಬಹಳ ಹಿಂದೆ ಹುಟ್ಟಿದ ಬಲ್ಲಾಳರ...)

ರ — ದುಂಬೆ ದುಂಬೇದಾ ಕಾಲಾದವ್ವೋ ಬಲ್ಲಾಲಾವ್ವೋ ಪುಟ್ಟಿನಾಡೆ
ಓಲುದಾನೀಯೇ ಕೇನೋಡುಯೇ ಯೇಯೇಯೇ
ಬೆರಿಮೇರೆನವೋ ಪುದರಾಂಡವೋ
ತೆರಿಯೊಡ್‌ಂದೇ ಪನ್ನಾಗುಂಡೊ
ಅದ್‌ರ್ ಕರಿಯೋಡು ಬೊಲಿಯ ಒಂಜಾ
ಪರ್ಮಲೆವ್ವೋ ದೇಸೋಡುಯೇ ಯೇ ಯೇ ಯೇ
ಬೆರ್ಮೆರೇ ಪೂದಾರ್ ತೆರಿಯೋಡೋ ಆ
ಪನ್ನಾಗ ಉಂಡುಗೇಯೇ ಯೇ ಯೇ ಯೇ

ರ/ವ — ಹಾಂ ಯೇ ಯೇ ಯೇ ಯೇ ಯೇ ಹಾಂ

ಅದ್‌ರ್‌ಕರಿಯ : ಅದ್‌ರ್, ಗಡಿ; ಕರಿಯ : ನದಿ ದಾಟುವ ಜಾಗ / ನದಿಯ ಕಡವು; ಬೊಲಿಯ : ಬಿಳಿಯ

(ಬಹಳ ಹಿಂದಿನ ಕಾಲದ ಬಲ್ಲಾಳ ಹುಟ್ಟಿದ ನಾಡು / ಎಲ್ಲಿದೆಯೆಂದು ಒಮ್ಮೆ ಕೇಳಬೇಕು / ಬೆರ್ಮೆರ್ ದೈವದ ಹೆಸರು / ತಿಳಿಯಬೇಕೆಂದು ಹೇಳುವಾಗ / ನದಿಯ ಕಡವಿನ ಗಡಿಯಲ್ಲಿ 'ಜಿಳಿಯ'? / ಪರ್ಮಲೆ ದೇಶದಲ್ಲಿ ಬೆರ್ಮೆರ್ ದೈವದ ಹೆಸರು ತಿಳಿಯಬೇಕು / ಹೇಳುವಾಗ ಇದೆಯಂತೆ)

ವ ಬೆರ್ಮೆರೆವ್ವೋ ಪುದರ್‌ಲವ್ವೋ

ತೆರಿಯೋಡೋ ಪನ್ನಾಗಾ

ಬೆರ್ಮೆರೆನವ್ವೋ ಪುದಾರ್ ದಾನಿಯಾ ತೆರಿಯೋಡ್ಂದ್

ಪನ್ನಾಗ ಉಂಡುಗೇಯೇ ಯೇ ಯೇ

ವ / ರ ಹಾಂ ಯೇ ಯೇ ಯೇ ಯೇ ಹಾಂ

(ಬೆರ್ಮೆರ್ ದೈವದ ಹೆಸರು / ತಿಳಿಯಬೇಕೆಂದು ಹೇಳುವಾಗ / ಬೆರ್ಮೆರ್ ದೈವದ ಹೆಸರು ತಿಳಿಯಬೇಕು / ಹೇಳುವಾಗ ಇದೆಯೆಂದು ತಿಳಿದುಬರುತ್ತದೆ)

ರ ಬಿರ್ಮೆರ್‌ಗುಂಡೋ ಪಾದೋಡುಯೇ ಆನಿಗಂಗೇಯೇ ಮಾನಿಗಂಗೆ

ನೀರ್ ಗಂಗೇಯೇ ಉಂಡುಗೇಯೇ ಯೇ ಯೇ

ಬೆರ್ಮಿರೆಗುಂಡೋ ಪಾದೋಡವ್ವೋ

ಪನಿಪಂಚಾ ನಿರ್ಮಿದೋಡೋ ಯೇ ಯೇ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ

(ಬೆರ್ಮೆರ್ ದೈವದ ಪಾದದಲ್ಲಿ ಆನಿಗಂಗೆ, ಮಾನಿಗಂಗೆ / ನೀರು ಗಂಗೆ-ಎಂಬ ನದಿಗಳಿವೆ / ಬೆರ್ಮೆರ್ ದೈವದ ಪಾದಕ್ಕೆ / 'ಪನಿಪಂಚ' ಎಂಬ ಆಭರಣ ನಿರ್ಮಿಸುತ್ತಾರೆ)

ವ ಆ ಬೆರ್ಮೆರೆನವ್ವೋ ಪುಟ್ಟಿನದೇ ಪೋವೋಡೋ ಪನ್ನಾಗಾ

ಬೆರ್ಮೆರೆನವ್ವೋ ಪುದಾರ್ ದಾನಿಯಾ

ತೆರಿಯೋಡೋ ಪನ್ನಾಗಾ

ಉಂಡುಗೇಯೇ ಯೇ ಯೇ

ವ / ರ ಹಾಂ ಯೇ ಯೇ ಯೇ ಯೇ ಹಾಂ

(ಬೆರ್ಮೆರ್ ದೈವ ಹುಟ್ಟಿದ ದೇಶಕ್ಕೆ ಹೋಗಬೇಕೆಂದು ಹೇಳುವಾಗ / ಬೆರ್ಮೆರ್ ದೈವದ ಹೆಸರೇನೆಂದು / ತಿಳಿಯಬೇಕೆಂದು ಹೇಳುವಾಗ / ಇದೆಯಂತೆ)

ರ ಆಲಾ ಬಿರ್ಮೆರೇ ಪಾದೋಡುಂಡೋ
ಪನಿ ಪಂಚಾವೋ ನಿರ್ಮಿಗುಲೋ
ಮುರಂಪುಡುಂಡೋ ಮುಲ್ಲಾನಂದಾ
ಕಾವೇರೊಂಜೇ ನಿರ್ಮಿದೇರೇ ಏ ಏ
ಒಕ್ಕೋಡ್ ಒಲಿ ಮುಲ್ಲಾ ದೇವೇರ್‌ಯೇ ಯೇ
ಬಂಜಿಡ್‌ಯೇ ಬಾಸಿಂಗ ದೇವೇರ್‌ಯೇ ಯೇ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ

ಮುರಂಪು : ಮೊಣಕಾಲು; ಮುಲ್ಲಾನಂದ : ನಿಧಾನವಾಗಿ ಹರಿಯುವ; ಕಾವೇರಿ–ಕಾವೇರಿ ನದಿ; ಒಕ್ಕ : ಸೊಂಟ; ಒಲಿ : ತಾಳೆಯ ಗರಿ; ಬಂಜಿ :ಹೊಟ್ಟೆ; ಬಾಸಿಂಗ : ಮದುಮಗನ ತಲೆಗೆ ಕಟ್ಟುವ ಆಭರಣ

(ಬೆರ್ಮೆರ್ ದೈವದ ಪಾದದಕ್ಕೆ / 'ಪನಿಪಂಚ' ಆಭರಣ ನಿರ್ಮಿಸುತ್ತಾರೆ / ಬೆರ್ಮೆರ್ ದೈವದ ಮೊಣಕಾಲಲ್ಲಿ ನಿಧಾನವಾಗಿ ಹರಿಯುವ / ಕಾವೇರಿ ನದಿ ನಿರ್ಮಿಸುತ್ತಾರೆ / ಸೊಂಟದಲ್ಲಿ ತಾಳೆಯ ಗರಿ ಧರಿಸಿದ ದೇವರು / ಹೊಟ್ಟೆಯಲ್ಲಿ 'ಬಾಸಿಂಗ' ಆಭರಣ ಧರಿಸಿದ ದೇವರು)

ವ ಆ ಬೆರ್ಮೆರೇಗುಂಡೋ ಪಾದೋಡುಂಡೋ
ಆ ಪಾನಿ ಪಂಚಾವೋ ನಿರ್ಮಿದೊಡೋ
ಒಕ್ಕೊಡುಂಡೋ ಒಲಿ ಮುಲ್ಲಾವೋ
ಆ ಮುರಂಪುಡು ಉಂಡೋ ಮುಲ್ಲಾನಂದಾವೋ ಕಾವೇರೇ
ಬೆರ್ಮೆರೆಗ್ ಉಡುಂಗೇಯೇ ಯೇ ಹಾಂ ಯೇ ಯೇ

ವ/ರ ಹಾಂ ಯೇ ಯೇ ಯೇ ಯೇ ಹಾಂ

(ಬೆರ್ಮೆರ್ ದೈವದ ಪಾದದಲ್ಲಿದೆ / ನಿರ್ಮಿಸಿದ 'ಪನಿಪಂಚ' ಆಭರಣ / ಸೊಂಟದಲ್ಲಿದೆ ಮುಳ್ಳಿನ ಎಲೆ?/ ಮೊಣಕಾಲಿನಲ್ಲಿ ಹರಿಯುವ ನದಿ / ಬೆರ್ಮೆರ್ ದೈವಕ್ಕೆ ಇವೆ)

ರ ದಾಲ ಒಂಜೇ ಬಲಾತ್ತ್‌ಗೇ
ಬಂಗಾರಿನ್ನಾವೋ ಜನ್ನಿವಾರ
ಎಡತ್ತ್‌ಡುಂಡೋ ಬೊಲ್ಲಿದಲಾ
ಜನ್ನಿವಾರೋನೋ ನಿರ್ಮಿದೇರೆ
ಬೆರ್ಮೆರೇಗೇ ನಿರ್ಮಿನಾಗಾವೋ ವೋ ವೋ
ತಿಗಲೆಡ್‌ಂಡುಲ್ಲಾಯಾ ಅಮೃತದಾವೋ
ಗಿಂಡೇ ನಿರ್ಮಿದೇರೇ ಯೇ ಯೇ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ
(ಬಲಭಾಗದಲ್ಲಿ ಧರಿಸಲು / ಬಂಗಾರದ ಜನಿವಾರ / ಎಡಭಾಗದಲ್ಲಿ ಧರಿಸಲು ಬೆಳ್ಳಿಯ / ಜನಿವಾರ ನಿರ್ಮಿಸುತ್ತಾರೆ / ಬೆರ್ಮೆರ್ ದೈವಕ್ಕೆ ನಿರ್ಮಿಸುವಾಗ / ಎದೆಯಲ್ಲಿ ಧರಿಸಲು ಅಮೃತದ / ಗಿಂಡಿ ನಿರ್ಮಿಸುತ್ತಾರೆ, ಒಡೆಯರೇ)

ವ ಬೆರ್ಮೆರೆಗುಂಡೋ ಬಲತ್ತ್‌ಡ್‌ಂಡೋ
ಬಂಗಾರಿದಾವೋ ಜನಿವಾರ
ಎಡತ್ತ್‌ಡುಂಡೋ ಬೊಲ್ಲಿದಾವೋ
ಜನಿವಾರಾ ನಿರ್ಮಿದೇರ್‌ಗೇಯೇ ಯೇ ಹಾಂ
ತಿಗಲೆಡುಂಡುಲಾ ಅಮೃತದಾವೋ ಗಿಂಡೇಯೇ
ಆ ನಿರ್ಮಿದೇರೇ ಬೆರ್ಮೆರೇಗೇಯೇ ಯೇ ಯೇ ಹಾಂ

ವ/ರ ಹಾಂ ಯೇ ಯೇ ಯೇ ಯೇ ಹಾಂ
(ಬೆರ್ಮೆರ್ ದೈವಕ್ಕೆ ಬಲಭಾಗದಲ್ಲಿ ಧರಿಸಲು / ಬಂಗಾರದ ಜನಿವಾರ / ಎಡಭಾಗದಲ್ಲಿ ಧರಿಸಲು ಬೆಳ್ಳಿಯ / ಜನಿವಾರ ನಿರ್ಮಿಸುತ್ತಾರೆ / ಎದೆಯಲ್ಲಿ ಅಮೃತದ ಗಿಂಡಿ / ಬೆರ್ಮೆರ್ ದೈವಕ್ಕೆ ನಿರ್ಮಿಸುತ್ತಾರೆ)

ರ ಕೆಕ್ಕಿಲುಂಡುಲ್ಲಾಯಾ ಕುರಲೊಂಜೇಯೇ
ಪದೆತ್ತೋನೋ ನಿರ್ಮಿದೇರೇ
ಬೆರ್ಮಿರೇಗೇಯೇ ಬಾಯಿಡುಂಡೋ

ಕೊಲಲ್ ಒಂಜೇ ಮೂಂಕುಡುಲಾ
ಕೊಲಲವೊಂಜಾವೋ ಕೊರಲ ಪದೆತ್ತಾವೋ ನಿರ್ಮಿದೇರ್
ಕೆಮಲತ್ತಾ ಬಿರ್ಮೆರೇಗ್‌ಯೇ ಯೇ ಯೇ ಹಾಂ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ

ಕುರಲ್‌ಪದಕ : ಕೊರಳಿನಲ್ಲಿ ಧರಿಸುವ ಪದಕ; ಕೊಲಲ್ : ಕೊಳಲು

(ಬೆರ್ಮೆರ್ ದೈವದ ಕುತ್ತಿಗೆಗೆ ಓ ಒಡೆಯರೇ ಕೊರಳಿನ / ಪದಕ ನಿರ್ಮಿಸುತ್ತಾರೆ / ಬೆರ್ಮೆರ್ ದೈವಕ್ಕೆ ಬಾಯಿಯಲ್ಲಿದೆ / ಕೊಳಲು, ಮೂಗಿನಲ್ಲಿ / ಕೊಳಲು / ಕೊರಳಲ್ಲಿ ಧರಿಸುವ ಪದಕ ನಿರ್ಮಿಸುತ್ತಾರೆ ಕೆಮಲತ್ತ ಬೆರ್ಮೆರ್ ದೈವಕ್ಕೆ)

ವ ಬೆರ್ಮೆರೆಗುಂಡೋ ಕೆಕ್ಕಿಲ್‌ಗ್ ಯೇ
ಕೊರಲಾವೋ ಪದೆಕ್ಕಾದೆ
ಬಾಯಿಡುಂಡೋ ಬಾಯಿಡುಂಡೋಯೇ
ಮೂಂಕುಡುಂಡೋ ಕೊಲಲ್ ದಾನೀಯೇ
ಬೆಮೆರೇಗೇ ನಿರ್ಮೀ ಕಾಲೋಡು ಯೇ ಯೇ ಯೇ

ವ/ರ ಹಾಂ ಯೇ ಯೇ ಯೇ ಯೇ ಹಾಂ

(ಬೆರ್ಮೆರ್ ದೈವದ ಕುತ್ತಿಗೆಯಲ್ಲಿ / ಕೊರಳಿನ ಪದಕ / ಬಾಯಿಯಲ್ಲಿ, ಬಾಯಿಯಲ್ಲಿ / ಮೂಗಿನಲ್ಲಿ ಕೊಳಲು / ಬೆರ್ಮೆರ್ ದೈವಕ್ಕೆ ನಿರ್ಮಿಸುವ ಕಾಲ)

ರ ಬಿರ್ಮೇರೇಗೇ ದಾಲಾವೊಂಜೇಯೇ
ತರೆಟ್ಟುಂಡೋ ಏಲ್ ನಿಲೆ
ಸತ್ತಿಗೇನೇ ನಿರ್ಮಿದೇರೆ
ಮೊಡಂಬುಡುಂಡೋ ಮೂಜಿ ನಿಲೆ
ಸತ್ತಿಗೇನೇ ನಿರ್ಮಿದೇರೆ
ಸತ್ತಿಗೇದಾವೋ ಕೊಡಿ ಒಂಜಾ ನಿರೇಲ್‌ಡ್ ಯೇ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ

ಏಲ್ ನಿಲೆ : ಏಳು ಅಂತಸ್ತಿನ; ಮೂಜಿ ನಿಲೆ : ಮೂರು

ಅಂತಸ್ತಿನ; ಮುಡಂಬುಡು: ಭುಜದಲ್ಲಿ; ಕೊಡಿ: ಪತಾಕೆ / ಧ್ವಜ (ಬೆರ್ಮೆರ್ ದೈವದ / ತಲೆಗೆ ಏಳು ಅಂತಸ್ತಿನ / ಸತ್ತಿಗೆ ನಿರ್ಮಿಸುತ್ತಾರೆ / ಭುಜಕ್ಕೆ ಮೂರು ಅಂತಸ್ತಿನ / ಸತ್ತಿಗೆ ನಿರ್ಮಿಸುತ್ತಾರೆ / ಸತ್ತಿಗೆಯ ಧ್ವಜದ ನೆರಳಿನಲ್ಲಿ)

ವ ಬೆರ್ಮೆರೆಗಾಂಡಾವೋ ಏಲ್ ನಿಲೆವೋ
ಸತ್ತಿಗೇಯೇ ನಿರ್ಮಿದೇರ್
ದಾಲಾವುಂಡೋ ಮುಡುಂಬುಡೋ ದಾಲಾ
ಮೂಜಿ ನಿಲೆ ಸತ್ತಿಗೆ ದಾನೆ
ನಿರ್ಮಿನಾಗುಂಡುಯೇ ಯೇ ಯೇ

ವ/ರ ಹಾಂ ಯೇ ಯೇ ಯೇ ಯೇ ಹಾಂ

(ಬೆರ್ಮೆರ್ ದೈವದ ತಲೆಗೆ ಏಳು ಅಂತಸ್ತಿನ / ಸತ್ತಿಗೆ ನಿರ್ಮಿಸುತ್ತಾರೆ / ಭುಜಕ್ಕೆ / ಮೂರು ಅಂತಸ್ತಿನ ಸತ್ತಿಗೆ / ನಿರ್ಮಿಸಿದಾಗ)

ರ ಸತ್ತಿಗೇದಾ ಕೊಡಿ ಒಂಜಾವೋ
ನಿರೆಲ್‌ಡ್‌ಲಾವೋ ಬಲತ್ತ್‌ಡ್
ಬಲತ್ತ್‌ಡುಂಲ್ಲಾಯ ಪದಿರಾಡ್
ಆಣ್‌ಜೇವೋ ಕನ್ಯಾವೇರ್
ಎಡತ್ತ್‌ಡುಂಡೋ ಪದಿರಾಡ್
ಪೊಣ್ಣ್ ಜೇವೋ ಕನ್ಯಾವೇರ್
ಒಂಜಾ ನಿರ್ಮಿದೇರ್ ಯೇ ಯೇ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ

(ಸತ್ತಿಗೆಯ ಧ್ವಜದ / ನೆರಳಿನ ಬಲಭಾಗದಲ್ಲಿ / ಬಲಭಾಗದಲ್ಲಿ, ಓ ಒಡೆಯರೇ, ಹನ್ನೆರಡು / ಕುಮಾರರನ್ನು / ಎಡಭಾಗದಲ್ಲಿ ಹನ್ನೆರಡು / ಕುಮಾರಿಯರನ್ನು / ನಿರ್ಮಿಸುತ್ತಾರೆ)

ವ ಆ ಬಲತ್ತ್‌ಡುಂಲಾ ಅವ್ವು ದಾನೀ ಪದಿರಾಡ್
ಆಣ್ಣ್‌ಂಜೇವು ಕನ್ಯಾವೇರೆನ್

ನಿರ್ಮಿದೇರೇ ಹಾಂ
ಆ ಎಡತ್ತ್‌ಡುಂಡುಲಾ ಪದಿರಾಡ್ ದಾನಿಯೇ
ಪೊಣ್ಣ್ೋ ಕನ್ಯಾವೇರೆನ್
ನಿರ್ಮಿದೇರ್‌ಗೇಯೇ ಯೇ

ವ/ರ ಹಾಂ ಯೇ ಯೇ ಯೇ ಯೇ ಹಾಂ

(ಬಲಭಾಗದಲ್ಲಿ ಹನ್ನೆರಡು / ಕುಮಾರರನ್ನು / ನಿರ್ಮಿಸುತ್ತಾರೆ / ಎಡಬಾಗದಲ್ಲಿ ಹನ್ನೆರಡು / ಕುಮಾರಿಯರನ್ನು / ನಿರ್ಮಿಸುತ್ತಾರೆ)

ರ ಬೆರ್ಮೆರೇ ಪುರಾಲಾ ಪೂದಾರ್ ಒಂಜೇ
ಕೇನಿನಿಂದೇ ಪನ್ಪಾಗಾನೇ
ರಾಮ ರಾಮೋ ಕಾಲಾನೇಯೇಯೇ
ಬಿರ್ಮೆರೆ ನೀರಿದಾ ಪುದರ್ ಒಂಜಾ ತೆರಿಯೋಡೋ
ಪನ್ಪಾಗಾ ಉಂಡುಲ್ಲಾಯವೋ ವೋ ಯೇ ಯೇ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ

ಪುರಾಲಾ / ಪುರಾಪು: ವಂಶಾವಳಿ / ಹುಟ್ಟುಗುಟ್ಟು

(ಬೆರ್ಮೆರ್ ದೈವದ ಹುಟ್ಟುಗುಟ್ಟು / ಕೇಳಬೇಕು ಹೇಳುವಾಗ / ಪೂರ್ವಕಾಲದಲ್ಲಿ / ಬೆರ್ಮೆರ್ ದೈವ ಸೃಷ್ಟಿಸಿದ ನದಿಗಳ ಹೆಸರುಗಳೇನೆಂದು ತಿಳಿಯಬೇಕು / ಹೇಳುವಾಗ ಇವೆ ಓ ಒಡೆಯರೇ)

ವ ಬೆರ್ಮೆರೇ ಪುದಾರ್ ತೆರಿದಾವೊ ಬತ್ತ್‌ಂಡ್
ಬಿರ್ಮೆರಾಂಡಾವ್ವೋ ನೀರ್‌ದಾವೋ ಪುದಾರ್‌ನವ್ವೋ
ತೆರಿಯೋಡ್‌ಂದ್ ಪನ್ಪಾಗಾ
ಬೆರ್ಮೆರೇ ನೀರ್‌ದಾ ಪುದಾರ್ ದಾನೆ
ತೆರಿಯೋಡು ಪನ್ಪಾಗಾ
ಉಂಡುಗೇಯೇ ಯೇ ಯೇ ಯೇ

ವ/ರ ಹಾಂ ಯೇ ಯೇ ಯೇ ಯೇ ಹಾಂ

(ಬೆರ್ಮೆರ್ ದೈವದ ಹೆಸರು ತಿಳಿದು ಬಂತು / ಬೆರ್ಮೆರ್ ದೈವ ಸೃಷ್ಟಿಸಿದ ನದಿಗಳ ಹೆಸರುಗಳೇನೆಂದು / ಗೊತ್ತಾಗಬೇಕು ಹೇಳುವಾಗ / ಬೆರ್ಮೆರ್ ದೇವರು ಸೃಷ್ಟಿಸಿದ ನದಿಗಳ ಹೆಸರುಗಳೇನೆಂದು / ಗೊತ್ತಾಗಬೇಕು ಹೇಳುವಾಗ / ಹೀಗಿವೆ)

ರ ಆನಿ ಗಂಗೆಂಡುಲ್ಲಾಯ ಮಾನಿ ಗಂಗೇ

ನೀರ್ ಗಂಗೇ ನೆತ್ತೆರೇ

ಸಮಿದಿರವುಂಡೋ ಉಪ್ಪಿನೀರಾ

ಕುಡಲವೊಂಜೇ ಗಂಗೇವುಂಡೋ

ಪಾಮಸ್ ಗಂಗೇ ಒಂಜಿಲಾವೋ

ಬೆರಿಮೇರೆ ನೀರಿದಾವೋಯೇ ಯೇ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ

ಪಾಮಸ್ : ಹಾವಸೆ

(ಆನಿ ಗಂಗೆ, ಯಜಮಾನರೇ, ಮಾನಿ ಗಂಗೆ / ನೀರು ಗಂಗೆ, ರಕ್ತ / ಸಮುದ್ರ, ಉಪ್ಪು ನೀರ / ಮತ್ತೊಂದು ಗಂಗೆ ಇದೆ / ಹಾವಸೆ ಗಂಗೆ / ಬೆರ್ಮೆರ್ ದೈವ ಸೃಷ್ಟಿಸಿದ ನೀರಿನ...)

ವ ನೀರಿದವೋ ಪುದಾರ್‌ಲಾವೋ ತೆರಿಯೋಡ್‌ಂದೇ ಪನ್ನಾಗಾ

ಉಪ್ಪು ನೀರ್ ಗಂಗೇ ಉಂಡೋ

ಪೇರ್ ಗಂಗೆ ಉಂಡೋ ಬೆರ್ಪುದಾವೋ

ಗಂಗೆದ ಪುದಾರ್ ತೆರಿಯೋಡ್‌ಂದ್‌ದ್ ಯೇ ಯೇ ಯೇ

ಪಾಂಬಸ್ ಗಂಗೇಲಾ ದಾನೆ ತೆರಿಯೊಡ್‌ಂದ್ ಯೇ ಯೇ

ವ/ರ ಹಾಂ ಯೇ ಯೇ ಯೇ ಯೇ ಹಾಂ

(ನದಿಗಳ ಹೆಸರುಗಳನ್ನು ತಿಳಿಯಬೇಕೆಂದು ಹೇಳುವಾಗ / ಉಪ್ಪು ನೀರ ಗಂಗೆ ಇದೆ/ ನೀರು / ಹಾಲು ಗಂಗೆ ಇದೆ, ಬಿಸಿ ನೀರ / ಗಂಗೆಯ ಹೆಸರು ತಿಳಿಯಬೇತೆಂದು.../ ಹಾವಸೆ ಗಂಗೆಯ ಹೆಸರು ತಿಳಿಯಬೇಕೆಂದು...)

ರ ಬಿರ್ಮೆರೇ ನೀರೀದಾ ಪುದಾರಾಂಡೋವೋ
ತೆರಿದ್ ಬತ್ತ್ ಂಡ್ ಬೆರಿಮೆರೆನ
ಪುದಾರ್ ತೆರಿಯೇಯೇ ಕಾಲೋಡುಗೇ
ದುಂಬೆ ದುಂಬೇ ಕಾಲಾಂಡಾವೋ
ಬಲ್ಲಾಲೆ ಪುದಾರ್ ತೆರಿಯೋಡುಯೇ ಯೇ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ
(ಬೆರ್ಮೆರ್ ದೈವ ಸೃಷ್ಟಿಸಿದ ನದಿಗಳ ಹೆಸರುಗಳು / ತಿಳಿಯುತು, ಬೆರ್ಮೆರ್ ದೈವದ / ಹೆಸರು ತಿಳಿದುಬಂದ ಕಾಲ / ಬಹಳ ಹಿಂದಿನ ಕಾಲದ / ಬಲ್ಲಾಳರ ಹೆಸರು ತಿಳಿದುಕೊಳ್ಳಬೇಕು)

ವ ಬೆರ್ಮೆರೆ ನೀರ್ ದಾ ಪುದಾರ ದಾನೀಯೇ
ತೆರಿದ್ ಬನ್ನಾಗ
ಬಾರೆ ಬಲ್ಲಾಲೇ ಪೂದಾರ್ ತೆರಿಯೋಡು ಪನ್ನಾಗಾ
ಉಂಡುಗೇಯೇ ಯೇ ಯೇ

ವ/ರ ಹಾಂ ಯೇ ಯೇ ಯೇ ಯೇ ಹಾಂ
(ಬೆರ್ಮೆರ್ ಸೃಷ್ಟಿಸಿದ ನದಿಗಳ ಹೆಸರುಗಳು / ತಿಳಿದುಬರುವಾಗ / ರಾಜ್ಯಭಾರ ಮಾಡಿದ ಬಲ್ಲಾಳರ ಹೆಸರುಗಳನ್ನು ತಿಳಿಯಬೇಕೇಂದು ಹೇಳುವಾಗ / ಅವರ ಹೆಸರುಗಳು ಹೀಗಿವೆ)

ರ ಬಿರ್ಮೆರೇ ನೀರೀದಾ ಪುದಾರಾಂಡೋವೋ ತೆರದ್ ಬತ್ತ್ಂಡ್
ಬೆರಿಮೆರೆನ ಪುದಾರ್ ತೆರಿಯೇಯೇ ಕಾಲೋಡುಗೇ
ದುಂಬೆ ದುಂಬೇ ಕಾಲಾಂದಾವೋ
ಬಲ್ಲಾಲೆ ಪುದಾರ್ ತೆರಿಯೋಡುಯೇ ಯೇ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ
(ಬೆರ್ಮೆರ್ ಸೃಷ್ಟಿಸಿದ ನದಿಗಳ ಹೆಸರುಗಳು ತಿಳಿದುಬಂತು ಬೆರ್ಮೆರ್ ದೈವದ / ಹೆಸರು ತಿಳಿದುಬಂದ ಕಾಲದಲ್ಲಿ / ಬಹಳ ಹಿಂದಿನ ಕಾಲದ / ಬಲ್ಲಾಳರ ಹೆಸರುಗಳನ್ನು ತಿಳಿದುಕೊಳ್ಳಬೇಕು)

ವ ಬೆರ್ಮೆರೆ ನೀರ್‌ದಾ ಪುದಾರ ದಾನೀಯೇ ತೆರೀದ್ ಬನ್ನಾಗಾ
ದಾಲ ಬಲ್ಲಾಲೇ ಪೂದಾರ್
ತೆರಿಯೋಡೋ ಪನ್ನಾಗಾ
ಉಂಡುಗೇಯೇ ಯೇ ಯೇ

ವ/ರ ಹಾಂ ಯೇ ಯೇ ಯೇ ಯೇ ಹಾಂ

(ಬೆರ್ಮೆರ್ ಸೃಷ್ಟಿಸಿದ ನದಿಗಳ ಹೆಸರುಗಳು ತಿಳಿದುಬಂತು / ಬಲ್ಲಾಳರ ಹೆಸರುಗಳನ್ನು ತಿಳಿಯಬೇಕು ಹೇಳುವಾಗ / ಇವೆಯಂತೆ)

ಟಿಪ್ಪಣಿ : ಬೆರ್ಮೆರ್ ದೈವ ತುಂಬಾ ಅಲಂಕಾರ-ಪ್ರೇಮಿ ದೈವವೆಂದು ಕಾಣುತ್ತದೆ : ದೈವದ ಪಾದದಲ್ಲಿ ಆಭರಣ, ಕುತ್ತಿಗೆಯಲ್ಲಿ ಪದಕ, ಎದೆಯಲ್ಲಿ ಅಮೃತದ ಗಿಂಡಿ, ಹೊಟ್ಟೆಯ ಮೇಲೆ 'ಬಾಸಿಂಗ' ಆಭರಣ, ಬಾಯಿಯಲ್ಲಿ ಕೊಳಲು, ಬಲಭಾಗದಲ್ಲಿ ಬಂಗಾರದ ಜನಿವಾರ, ಎಡಭಾಗದಲ್ಲಿ ಬೆಳ್ಳಿಯ ಜನಿವಾರ, ದೈವದ ಬಲಭಾಗದಲ್ಲಿ ಸೇವಕರಾಗಿ ಹನ್ನೆರಡು ಕುಮಾರರು, ಎಡಭಾಗದಲ್ಲಿ, ಸೇವಕಿಯರಾಗಿ ಹನ್ನೆರಡು ಕುಮಾರಿಯವರು ಇದ್ದಾರೆ. ಬೆರ್ಮೆರ್ ದೈವ ವಿವಿಧ ಜಲಾಶ್ರಯಗಳನ್ನು ನಿರ್ಮಿಸುತ್ತಾನೆ: ಆನಿ ಗಂಗೆ, ಮಾನಿ ಗಂಗೆ, ನೀರು ಗಂಗೆ, ರಕ್ತ ಗಂಗೆ, ಉಪ್ಪು ನೀರು ಗಂಗೆ, ಹಾವಸೆ ಗಂಗೆ, ಮತ್ತು ಹಾಲು ಗಂಗೆ.

ಪರ್ಮಲೆ ಬಲ್ಲಾಳನ ಪೂರ್ವಜರು :

ರ ದುಂಬೇ ದುಂಬೇಲಾ ಕಾಲೋಡುಯೇಯೇ ಬಾರಿ ಬಲ್ಲಾಲ್ ಉಲ್ಲೇರ್‌ಗೇ
ಪರ್ಮಲೆ ಜನಾನೋಡ್ ಬಾರೊನೋದು
ಆರ್ಯಪೊದ್ದೇರ್ ಬಲ್ಲಾಲ್‌ಯೇ ಸೂರ್ಯ ಬನ್ನಾರೇರ್ ಬಲ್ಲಾಲ್
ದಾಲಾ ಪದ್ಮಾನ ಮುದ್ಯೇರ್ ಬಲ್ಲಾಲ್ ಯೇ ಯೇ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ

(ಬಹಳ ಹಿಂದೆ ರಾಜ್ಯಭಾರ ಮಾಡಿದ ಬಲ್ಲಾಳರಿದ್ದರು / ಪರ್ಮಲೆ ಮನೆತನದ ಬಲ್ಲಾಳರು/ಆರ್ಯಪೊದ್ದೇರ್ ಬಲ್ಲಾಳ, ಸೂರ್ಯ ಬನ್ನಾರ ಬಲ್ಲಾಳ/ಪದ್ಮಾನ ಮುದ್ಯೇರ್ ಬಲ್ಲಾಳ)

ವ ದಾಲಾ ಉಂಡುಗೇ ಬಲ್ಲಾಲ್‌ಯೇ ಪರ್ಮಲೇಯೇ ಬಲ್ಲಾಲ್‌ಯೇ
ದುಂಬೆ ಮುಂಚೇಯೇ ಕಾಲಾದಾ ಬಲ್ಲಾಲೇ ಪುದಾರ್ ತೆರಿಯೋಡುದೆ
ಆರ್ಯ ಪೊದ್ದೇರ್ ಸೂರ್ಯಾವೋ
ಬನ್ನಾರೇ ಪದ್ಮ ಬನ್ನಾರೇ ಯೇ ಯೇ

ವ/ರ ಹಾಂ ಯೇ ಯೇ ಯೇ ಯೇ ಹಾಂ

(ಇದ್ದರು ಬಲ್ಲಾಳರು ಪರ್ಮಲೆ ಬಲ್ಲಾಳರು / ಬಹಳ ಹಿಂದಿನ ಕಾಲದ ಬಲ್ಲಾಳರ ಹೆಸರು ತಿಳಿಯಬೇಕು / ಆರ್ಯ ಪೊದ್ದೇರ್ ಬಲ್ಲಾಳ, ಸೂರ್ಯ ಬನ್ನಾರ ಬಲ್ಲಾಳ / ಪದ್ಮ ಬನ್ನಾರ)

ರ ದೇವಾನಾ ಅಜಿಲೇರ್ ಬಲ್ಲಾಲೇನಾ ಕಾಲೋಡುಯೇ ಕುಜಂಬನಲ
ಮುದ್ದೇರ್‌ಯೇ ಬಲ್ಲಾಲ್ ಯೇ ಯೇ ಯೇ
ಆರ್ ಮುರಾದೇರ್ ಮಾರಾ ಕಡಂಬೇರ್ ಬಲ್ಲಾಲೇಯೇ
ಜನನೋಡ್ ಬಾರೋನೋದೋ ಯೇ ಯೇ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ

(ದೇವನ ಅಜಿಲೇರ್ ಬಲ್ಲಾಳರ ಕಾಲದಲ್ಲಿ ಕುಜಂಬ / ಮುದ್ದೇರ್ ಬಲ್ಲಾಳ / ಅವರ ನಂತರ ಆರ್ ಮುರಾದೇರ್, ಮಾರ ಕಡಂಬ ಬಲ್ಲಾಳ / ಮನೆತನದವರು ರಾಜ್ಯಭಾರ ಮಾಡುತ್ತಾರೆ)

ವ ದುಂಬೆ ಕಾಲಾದಾವೋ ಬಲ್ಲಾಲ್‌ಯೇ
ಆರ್ ಮೂರಾದೇರ್‌ಗೇ ಮಾರ ಕಡಂಬ ಬಲ್ಲಾಲ್ ಯೇ
ಇತ್ತೆ ಬಾರಿನಾರ್ ಬಲ್ಲಾಲ್ ಯೇಯೇಯೇ
ಇತ್ತೇ ಬಾರಿನಾ ಬಲ್ಲಾಲ್ ಉಂಡು ದಾಲಾವೋ ಪನ್ನಾಗಾ
ಉಂಡುಗೇ ಯೇ ಯೇ ಯೇ

ವ/ರ ಹಾಂ ಯೇ ಯೇ ಯೇ ಯೇ ಹಾಂ

(ಹಿಂದಿನ ಕಾಲದ ಬಲ್ಲಾಳರಿದ್ದರು / ಏರ್ ಮುರದೇರ್ ಮಾರ ಕಡಂಬ ಬಲ್ಲಾಳ ಆಳಿದರು / ಈಗ ಆಳುವ ಬಲ್ಲಾಳ / ಈಗ ಆಳುವ ಬಲ್ಲಾಳ ಯಾರೆಂದು ಕೇಳುವಾಗ / ಇದ್ದಾರೆ)

ರ ಒರಿ ಮುರಾದೇರ್ ಕೊಂತಳಂದಾ ಅತಿಕಾರಿಯೇ ಬಲ್ಲಾಲ್ ಯೇ
ಅಗಲೇಗ್ ಜನನೋಡ್ ಇರ್‌ಮುಡೀ ಅಂತರೋಂಜೇ
ಬರ್ನಾಗಾಯೇಂಯೇ
ಪರ್ಮಲೆ ಜನನೋಡ್ ಮರ್‌ಮಾಲೆ ಕಂಡನೆ ಪರ್ಮಲೇ
ಬಲ್ಲಾಲೇ ಬಾರೋಂದುಯೇ ಯೇ ಯೇ ಯೇ

ರ/ವ ಹಾಂ ಯೇ ಯೇ ಯೇ ಯೇ ಹಾಂ

ಕೊಂತಳ : ಕೊತಲ, ಕೋಟೆಯ ಬುರುಜು / ಆವರಣ; ಇರ್‌ಮುಡೀ : ಎರಡು ತಲೆಮಾರು?; ಮರ್‌ಮಾಲೆ / ಮರ್ಮಲ್ : ಸೋದರಸೊಸೆ; ಕಂಡನೆ : ಗಂಡ

(ಒಬ್ಬರು ಮುರಾದೇರ್, ಕೋಟೆಯ ಅತಿಕಾರಿ ಬಲ್ಲಾಳ / ಅವರು ಹುಟ್ಟಿ ಎರಡು ಪೀಳಿಗೆಯ ಮಧ್ಯಾಂತರ / ಬರುವಾಗ / ಪರ್ಮಲೆ ಮನೆತನದಲ್ಲಿ, ಸೋದರ ಸೊಸೆಯ ಗಂಡ, ಪರ್ಮಲೆ / ಬಲ್ಲಾಳ ಆಳುತ್ತಿದ್ದರು)

ವ ಒರಿ ಮೂರಾದೇರ್ ದಾಲ ಒಂಜೇ ಬಲ್ಲಾವೋ ಉಲ್ಲೇರ್
ಅಗಲೆ ದುಂಬಾವೋ ಕಾಲಾದಾವೋ
ಮರ್ಮಾಲೆ ಕಂಡೆನೆ ಉಲ್ಲೇರ್ ಯೇ
ಪರ್ಮಲೇ ಬಲ್ಲಾಲೇ ಪನ್ನಾಗಾವೋ
ಆ ಉಲ್ಲೇರ್ ದಾನಿಗೇಯೇ ಯೇ ಯೇ

ವ/ರ ಹಾಂ ಯೇ ಯೇ ಯೇ ಯೇ ಹಾಂ

(ಒಬ್ಬರು ಮೂರಾದೇರ್ ಬಲ್ಲಾಳರಿದ್ದರು / ಅವರ ಮುಂಚೆ / ಸೋದರ ಸೊಸೆಯ ಗಂಡ / ಪರ್ಮಲೆ ಬಲ್ಲಾಳ ಹೆಸರಿನ / ಬಲ್ಲಾಳರಿದ್ದರು)

* * * * *

ಅಧ್ಯಾಯ 2

ಏಕನ /ಏಕಡ ಸಾಲೇರೆ ಸಂಧಿ

(ಪರ್ಮಲೆ ಬಲ್ಲಾಳನ ಪೂರ್ವ ಕಥೆ)

ಕೋಟಿ ಚೆನ್ನಯ ಪಾಡ್ದನದಲ್ಲಿ ಪರ್ಮಲೆ ಬಲ್ಲಾಳನ ಪಾತ್ರ ಬಹಳ ಮುಖ್ಯವಾದುದು. ಪರ್ಮಲೆ (ಕನ್ನಡ, ಪಡುಮಲೆ) ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಪ್ರದೇಶದಲ್ಲಿದೆ. ಪರ್ಮಲೆ ಬಲ್ಲಾಳ ಪರ್ಮಲೆಯ ತುಂಡರಸನಾಗಿದ್ದನೆಂದು ಪ್ರತೀತ. ಮೇನರರ ಪಾಡ್ದೊನೊಳು ಕೃತಿಯಲ್ಲಿ ಪರ್ಮಲೆ ಬಲ್ಲಾಳ ಹೇಳುವ ಎರಡು ವಾಕ್ಯಗಳಿವೆ: 'ಆನಿ ಬಲ್ಲಾಳೆ ಅಪ್ಪೆ ಗಿಳಿರಾಮ ದೆಯ್ಯಾರ್ ಪೆದ್ದ್‌ದಳ್/ಇನಿ ನಿನ ಬಂಜಿಡ್ ಯಾನ್ ಬರ್ಪಿನಿ' (ಅಂದು ತಾಯಿ ಗಿಳಿರಾಮ ದೆಯ್ಯಾರ್ ಹೆತ್ತಿದ್ದರು / ಇವತ್ತು ನಿನ್ನ ಹೊಟ್ಟೆಯಲ್ಲಿ ಹುಟ್ಟಿದ್ದೇನೆ) (1886: ಪುನರ್‌ಮುದ್ರಣ : 2008 : ಪುಟ 58).

ಪರ್ಮಲೆ ಬಲ್ಲಾಳ ಬೇಟೆಗೆ ಹೋದಾಗ ವಿಷದ ಮುಳ್ಳು ಕಾಲಿಗೆ ಚುಚ್ಚಿ, ಅವನ ಜೀವಕ್ಕೆ ಅಪಾಯ ಬರುತ್ತದೆ. ಆಗ ತುಂಬಿದ ಗರ್ಭಿಣಿಯಾದರೂ ದೇಯಿ ಬೈದೆದಿ ಬಲ್ಲಾಳನ ಚಿಕಿತ್ಸೆ ಮಾಡಿ ಜೀವ ಉಳಿಸಿದಾಗ ಬಲ್ಲಾಳ ಹೇಳುವ ಈ ಮಾತು. ಇದರಿಂದ ಪರ್ಮಲೆ ಬಲ್ಲಾಳ ಏಕನಸಾಲೇರ್ ಮತ್ತು ದೆಯ್ಯಾರರ ಮಗನೆಂದು ತಿಳಿದುಬರುತ್ತದೆ.

ಏಕನ/ ಏಕಡ ಸಾಲೇರೆ ಸಂಧಿಯಲ್ಲಿ ಹಿಂದಿನ ಕಾಲದ ತುಳುವ ಮದುವೆಯ ವಿಸ್ತಾರವಾದ ವರ್ಣನೆ ಸಿಗುತ್ತದೆ.

ರಘು : ಡೆನನ್ನಾ ಡೆನ್ನಾ ಡೆನಾನ್ನಾಯೇ ಯೇ ಯೇ ಹಾಂ
ಡೆನನ್ನಾ ಡೆನ್ನಾನಾ
ಡೆನನ್ನ ಡೆನ್ನ ಡೆನನ್ನಾಯೇಯೇ
ಡೆನನ ಡೆನ್ನಾನ ಡೆನ್ನಾವೋ ಹಾಂ

ವಸಂತಿ ಡೆನನ ಡೆನನ ಡೆನ್ನೇಯೇ ಹಾಂ
ಆ ಡೆನ್ನಾ ಡೆನನ್ನೇಯಾ
ಡೆನ್ನಾ ಡೆನ್ನಾವೋ ಡೆನ್ನಾ ಡೆನ್ನಾಯೇ

ರ ದಾಲಾ ದುಂಬೇಲಾ
ದುಂಬೇ ಕಾಲೋಡುತ್ತೇರೇ
ಆಮಜೆದಾ ಒಂಜಾ
ಕಾಲೋಡುಯೇ
(ತುಂಬಾ ಹಿಂದಿನ / ಕಾಲದಲ್ಲಿದ್ದರು / ಆಮಜೆಯ / ಕಾಲದಲ್ಲಿ)

ವ ದುಂಬೆ ದುಂಬೇಲಾವೋ
ಆ ಕಾಲೋಡುಗೇಯಾ
ಆ ಆಮಜೆ ಇಲ್ಲಾಡೇ
ಇಪ್ಪುನಾಗ ಉಂಡುಯೇ
(ಬಹಳ ಹಿಂದಿನ / ಕಾಲದಲ್ಲಿ / ಆಮಜೆ ಮನೆಯಲ್ಲಿ / ಇರುವಾಗ)

ರ ಅಕ್ಕೇ ಗಿಳಿರಾಮಾ ದೆಯ್ಯಾರೇ
ಇತ್ತೇರೊಂಜೀಯೇ
ಆರೆನ ಮಗಳ್
ಗಿಂಡೆ ಗಿಳಿರಾಮ ದೆಯ್ಯಾರ್ ಇತ್ತೇರ್‌ಯೇ
(ಅಕ್ಕೆ ಗಿಳಿರಾಮ ದೆಯ್ಯಾರ್ / ಇದ್ದರು / ಅವರ ಮಗಳು / ಗಿಂಡೆ ಗಿಳಿರಾಮ ದೆಯ್ಯಾರ್ ಇದ್ದರು)

ವ ಆಲಾದಾಲಾವೋ
ಅಕ್ಕೆ ಗಿಳಿರಮವೋ ಆ
ಆ ದೆಯ್ಯಾರ್ ಮಗಳ್‌ಲಾವೋ
ಆ ಉಲ್ಲೇರ್‌ಯೇ
(ಆ ಕಾಲದಲ್ಲಿ / ಅಕ್ಕೆ ಗಿಳಿರಾಮ / ದೆಯ್ಯಾರ ಮಗಳು / ಇದ್ದರು)

ರ ಗಿಂಡೇ ಗಿಳಿರಾಮಾ
ದೆಯ್ಯಾರೇನೀಲಾ

ತುವರಾ ಬರುವೇರ್‌ಯೇ
ಪರ್ಮಲೆ ಜನನೋಗೋ
(ಗಿಂಡೆ ಗಿಳಿರಾಮ / ದೆಯ್ಯಾರನ್ನು / ನೋಡಲಿಕ್ಕೆ ಬರುತ್ತಾರೆ / ಪರ್ಮಲೆ ಮನೆತನಕ್ಕೆ)

ವ ಗಿಂಡೆ ಗಿಳಿರಾಮವೋ
ದೆಯ್ಯಾರೇನೇಯಾ
ತುವರಾ ದಾನೀಲಾವೋ
ಪರ್ಮಲೆ ಜನನೋಗೋ
(ಗಿಂಡೆ ಗಿಳಿರಾಮ / ದೆಯ್ಯಾರನ್ನು / ನೋಡಲಿಕ್ಕೆ / ಪರ್ಮಲೆ ಮನೆತನಕ್ಕೆ)

ರ ಪರ್ಮಲೆ ಜನನೋಗೋ
ಬರುವೇರೇ ಬರನ ಬಿನ್ನೇರೆ
ಎನ್ನಾ ಜನನೋಗೋ ದಾನೆ ಬತ್ತ್‌ನ್
ಬರನ ಬಿನ್ನೇರ್ ಇನ್ವೇರೇ

ಬಿನ್ನೆರ್ : ಅತಿಥಿಗಳು, ನೆಂಟರು
(ಪರ್ಮಲೆ ಮನೆತನಕ್ಕೆ / ಬರುತ್ತಾರೆ ಎಂದೂ ಬಾರದ ನೆಂಟರು / ನನ್ನ ಮನೆತನಕ್ಕೆ ಯಾಕೆ ಬರುತ್ತಿದ್ದಾರೆ / ಎಂದೂ ಬಾರದ ನೆಂಟರು ಹೇಳುತ್ತಾರೆ)

ವ ಪರ್ಮಲೆ ಜನನೋಗೋ
ಆ ಬತ್ತೇರಿಗೇಯಾ ಹಾಂ
ಆ ಎನ್ನಾ ಜನನೋಗೋ
ದಾನಿ ಬತ್ತರ್‌ಯೇ
(ಪರ್ಮಲೆ ಮನೆತನಕ್ಕೆ / ಬರುತ್ತಾರೆ / ನನ್ನ ಮನೆತನಕ್ಕೆ / ಯಾಕೆ ಬರುತ್ತಿದ್ದಾರೆ)

ರ ಬಾಕ್ಯಾರ ಕಟ್ಟ ಪುನಿಟ್ಟೇಯಾ
ತೂತೇರ್ ದಾಲಾ ದೆಯ್ಯಾರ್

ದಾನೆ ಬತ್ತ್‌ನಾ ಬಿನ್ನೇರ್
ಪಂಡೇರ್ ಒಂಜಾ ದೆಯ್ಯಾರ್‌ಯೇ

ಬಾಕ್ಯಾರ್ : ಮನೆಯ ಎದುರಿಗಿರುವ ದೊಡ್ಡ ಗದ್ದೆ; ಕಟ್ಟ ಪುನಿ : ಗದ್ದೆಯ ಎತ್ತರದ, ಅಗಲವಾದ ಅಂಚು / ಬದು / ಹುಣಿ

(ಮನೆಯ ಎದುರು ಗದ್ದೆಯ ಹುಣಿಯಲ್ಲಿ / ಬರುವುದನ್ನು ನೋಡುತ್ತಾರೆ ದೆಯ್ಯಾರ್ / ಯಾಕೆ ಬರುತ್ತಿದ್ದಾರೆ ನೆಂಟರು / ಹೇಳುತ್ತಾರೆ ದೆಯ್ಯಾರ್)

ವ ಬನ್ನಾಗಲಾವೋ ಆ
ಆ ಬಾಕ್ಯಾರ ಕಟ್ಟಾವೋ ಹಾಂ
ಆ ಪುನಿಯ ಬನ್ನಗಾಲಾವೋ ಹಾಂ
ತೂತೆರ್ ದೆಯ್ಯಾರುಯೇ

(ಬರುವಾಗ/ ಎದುರು ಗದ್ದೆಯ / ಹುಣಿಯಲ್ಲಿ ಬರುವಾಗ / ನೋಡುತ್ತಾರೆ ದೆಯ್ಯಾರು)

ರ ತೋಡಿದೀ ಗುವೇನಡೇಗೇ ಯಾ
ಪೋತೆರ್ ದೆಯ್ಯಾರ್
ಪಾಡ್‌ದ್ ಲಕ್ಕಸದಾ ಲಟ್ಟೇ ಮರಾ ಬಗ್ಗಾ
ಒಂಜಾ ಕೊಡಪನನೋ

ಗುವೆ (ಗುವೆಲ್?) : ಬಾವಿ; ಲಕ್ಕಸದಾ / ಅಕ್ಕಸದ : ಆಕಾಶಕ್ಕೆ ಹೋದ; ಲಟ್ಟೆ / ಅಟ್ಟ ಮರ : ಏತದಿಂದ ನೀರೆತ್ತಲಿಕ್ಕೆ ಉಪಯೋಗಿಸುವ ಮರದ ಕೋಲು; ಕೊಡಪನ : ಕೊಡ

(ಅಗೆದ ಬಾವಿ ಕಡೆಗೆ / ಹೋದರು ದೆಯ್ಯಾರ್ / ಹಾಕಿದ ಎತ್ತರದ ಏತ ಬಗ್ಗಿಸಿ / ಒಂದು ಕೊಡ)

ವ ತೋಡಿದೀ ಗುವೆನಾಡೇ
ಆ ಪೋತೆರ್ ದೆಯ್ಯಾರು ಹಾಂ
ಆ ತೋಡಿದೀ ಗುವೆನವುಲೋ
ಪಾಡ್‌ದಿ ಲಕ್ಕಾಸಾದಾವೋ

(ಅಗೆದ ಬಾವಿ ಕಡೆ / ಹೋದರು ದೆಯ್ಯಾರ್ / ಅಗೆದ ಬಾವಿಗೆ / / ಹಾಕಿದ ಎತ್ತರದ...)

ರ ಒಂಜೀ ಕಡ್ಯ ನೀರ್‌ನೇಯೆ ಯಾ
ಪತ್ತೇರ್ ಆರಾಂಡ
ಕಲ್ಲಾ ಮರಾಯಿಗ್ ಪಾಡ್ದ್
ಕೈತಾ ಕಾರ ದೆರತ್ತಾರನೀಯೇ

ಕಡ್ಯ : ಮಣ್ಣಿನ ಕೊಡ; ಕಲ್ಲ ಮರಾಯಿ : ಕಲ್ಲಿನ ಮರಿಗೆ

(ಒಂದು ಕೊಡ ನೀರು / ತರುತ್ತಾರೆ ಅವರು / ಕಲ್ಲಿನ ಮರಿಗೆಗೆ ಹೊಯ್ಯುತ್ತಾರೆ / ಕೈ ಕಾಲು ತೊಳೆಯಲಿಕ್ಕೆ)

ವ ಒಂಜಿ ಕೊಡಪಾನಾವೋ
ಆ ನೀರ್ ದೆವುದೇರ್ ಹಾಂ
ಆ ಗೆಂದತಾರೆದಾವೋ
ಕಟ್ಟೆಡ್ ದಾನೀಯೇ

ಕೊಡಪಾನ / ಕೊಡಪನ : ಕೊಡ; ಗೆಂದತಾರೆ : ಗೆಂದಾಳೆ; ಕೆಂಪು ತೆಂಗು

(ಒಂದು ಕೊಡ / ನೀರು ತೆಗೆಯುತ್ತಾರೆ / ಕೆಂಪು ತೆಂಗು ಮರಕ್ಕೆ ಕಟ್ಟಿದ / ಕಟ್ಟೆಯಲ್ಲಿ...)

ರ ಕೈಕ್ಕೇ ಕೈರಂಕೋನೋ ಓ
ಆ ಕೊರ್ತೇರ್ ದೆಯ್ಯಾರ್
ಕೈತ್ತಾ ಕೈದೂಲು ಕಾರ್ದ ಕೈದ ಒಂಜಾ
ದೆಕ್ಕ್‌ಲೇ ಬಿನ್ನೇರೇ

ಕೈರಂಕ : ಗರಟೆ / ಕರಟೆಗೆ ಹಿಡಿಹಾಕಿ ಮಾಡಿದ ನೀರು ತೆಗೆಯುವ ಸಾಧನ

(ಕೈಯಲ್ಲಿ 'ಕೈರಂಕ' / ಕೊಡುತ್ತಾರೆ ದೆಯ್ಯಾರ್ / ಕೈ ಕಾಲಿನ ದೂಳು / ತೊಳೆಯಿರಿ ನೆಂಟರೇ)

ವ ಕಲ್ಲ್‌ದ ಮರಾಯಿಗ್‌ಯೇ
ನೀರ್ ಮೈದೇರ್ ಹಾಂ
ಆ ಕಂಚಿದ ಕೈರಂಕೋನೋವೋ
ಬತ್ತಿನ ಬಿನ್ನೇರೇಗೇ
(ಕಲ್ಲಿನ ಮರಿಗೆಗೆ / ನೀರು ಹೊಯ್ಯುತ್ತಾರೆ / ಹಿಡಿಕೆಯ ಕಂಚಿನ ಬಿಂದಿಗೆ/ ಬಂದ ನೆಂಟರಿಗೆ...)

ರ ಕಾರ್‌ದ ಪೊಡಿ ದೂಲವ್ವೋ
ತಿಗಲೆದ ಮುತ್ತಿನಾ ಮೋನೆದ
ಬಿಗರ್‌ನೊಡ್ಡಿನಾ ಬಿನ್ನೇರೇನೆ
ಚಾವಾಡೀ ಲೆವುದ್ದೇರ್‌ಯೇ

ಮುತ್ತಿನಬಿಗರ್ / ಮುತ್ತುಬಿಗರ್ : ಹನಿಬೆವರು; ನೊಡಿ : ಕೈ ಕಾಲು ತೊಳೆಯು
(ಕಾಲಿನ ಪುಡಿ ದೂಳು / ಎದೆ ಮತ್ತು ಮುಖದ ಹನಿ / ಬೆವರು ತೊಳೆದ ನೆಂಟರನ್ನು / ಚಾವಡಿಗೆ ಕರೆಯುತ್ತಾರೆ)

ವ ಮುತ್ತಿನಾ ಬಿಗರ್‌ಯೇ
ಆ ಒಚ್ಚಿಲೇ ಬಿನ್ನೇರೇ ಯಾ
ಆ ಕಾರ್‌ದ ಯಮದೂಲೂನೋ
ಒಚ್ಚಿಲೆ ದಾನೀಯೇ

ಯಮದೂಲು : ದಟ್ಟವಾದ ದೂಳು
(ಹನಿಬೆವರು / ಒರಸಿರಿ ನೆಂಟರೇ / ಕಾಲಿನ ದಟ್ಟವಾದ ದೂಳು / ತೊಳೆಯಿರಿ)

ರ ಪಡ್ದಾಯಿ ಪದೊಲೀಡೇಯೇ
ತಾರಿದ ಸಕ್ಕಂದೋಲಿಯಾ
ಬುಡ್ಪಾದ್ ಬಿನ್ನೇರೇನಾ
ದಾಲಾ ಒಂಜಾ ಕುಲ್ಲಾದೇರ್‌ಯೇ

ಪಡ್ದಾಯಿ : ಪಶ್ಚಿಮ / ಪಡು ದಿಕ್ಕು; ಪದೊಲಿ : ಚಾವಡಿ; ತಾರಿ : ತಾಳೆ ಮರ; ಸಕ್ಕಂದಲ್ಯ : ಸಣ್ಣ ಚಾಪೆ

(ಪಡು ಚಾವಡಿಯಲ್ಲಿ / ತಾಳೆ ಗರಿಯ ಸಣ್ಣ ಚಾಪೆ / ಹರಡಿಸಿ ನೆಂಟರನ್ನು / ಕೂಡಿಸುತ್ತಾರೆ)

ವ ಪಡ್ಡಾಯಿ ಪದೊಲಿಡ್ವೋ
ಆ ತಾರಿದ ಸಕ್ಕಂದಲ್ಯಲಾವೋ ಆ
ಆ ಪಾರಾದಾಂಡಾಲಾವೋ
ಏರಿಯಾ ಬಿನ್ನೇರೇಯೇ

(ಪಡು ಚಾವಡಿಯಲ್ಲಿ / ತಾಳೆ ಗರಿಯ ಸಣ್ಣ ಚಾಪೆ / ಹರಡಿಸಿ / ಓ ನೆಂಟರೇ)

ರ ಬಿನ್ನೇರೇಗ್ ದಾಲೊಂಜೇಯಾ
ತಟ್ಟೆಡ್ ಬೆಲ್ಲಾಂಂಡ್
ಗಿಂಡೆಡ್ ನೀರೀಲಾ ಬೇಗದಾನೇ
ಅಸರ್ಗ್ ಪರ್ಲೇಯೇ

ಅಸರ್ : ಬಾಯಾರಿಕೆ

(ನೆಂಟರಿಗೆ / ತಟ್ಟೆಯಲ್ಲಿ ಬೆಲ್ಲ / ತಂಬಿಗೆಯಲ್ಲಿ ನೀರು ಬೇಗನೇ / ಬಾಯಾರಿಕೆಗೆ ಕುಡಿಯಿರಿ)

ವ ತಟ್ಟೆಡ್ ಬೆಲ್ಲಾಯೇ
ಆ ಗಿಂಡೆಡ್ ನೀರ್‌ಲಾ
ಆ ಏರ್ ಬಿನ್ನೇರೇಯೇ
ಬೆಲ್ಲಾ ನೀರ್ ಪರ್ಲೇಯೇ

(ತಟ್ಟೆಯಲ್ಲಿ ಬೆಲ್ಲ / ಗಿಂಡೆಯಲ್ಲಿ ನೀರು / ಓ ನೆಂಟರೇ / ಬೆಲ್ಲ ನೀರು ತೆಗೆದುಕೊಳ್ಳಿ)

ರ ಅತ್ತೇ ಒಂಜಾಂಡಾವೋ
ಹರಿವಾಣದ ಕಾಯಿಪೂಲು
ಕೊಂಡುದು ಕೊರ್ತೇರ್ ಬಿನ್ನೇರೇ ನಡುಸರಿಯ
ಕುಲ್ಲೇರ್ ದೆಯ್ಯಾರ್‌ಯೇ

ಕಾಯಿಪೂಲು : ಎಲೆಯಡಕೆ; ವೀಳ್ಯ

(ಅಷ್ಟು ಹೊತ್ತಿಗೆ / ಹರಿವಾಣದಲ್ಲಿ ಎಲೆ ಅಡಕೆ / ಕೊಡುತ್ತಾರೆ, ನೆಂಟರ ನಡುವೆ / ಕೂತುಕೊಳ್ಳುತ್ತಾರೆ ದೆಯ್ಯಾರ್)

ವ ಆಲಾದಾಲಾವೋ ಯೇ
ತಟ್ಟೆಡ್ ಕಾಯಿಪೂಲು ಆ
ಆ ಕೊನೊದು ಪತೊನುದೋ
ಆ ಬಿನ್ನೆರೆ ನಡುಟ್ಟಾರೆ

(ಅಷ್ಟು ಹೊತ್ತಿಗೆ / ತಟ್ಟೆಯಲ್ಲಿ ಎಲೆ ಅಡಿಕೆ / ತೆಗೆದುಕೊಂಡು ಹೋಗಿ/ ನೆಂಟರ ನಡುವೆ, ಅವರು)

ರ ದಾನೇ ಕಜ್ಜೋಡಾವೋ
ದಾನೇ ಕಾರ್ಯೋಡೇ ಒಂಜಾಂಡಾ
ಬತ್ತರ್ ಬಿನ್ನೇರೇ
ಒಲ್ತು ಬತ್ತ್‌ನ್ ದಾನೆ ಕೇಂಡೇರ್‌ಯೇ

(ಯಾವ ಕೆಲಸಕ್ಕಾಗಿ / ಯಾವ ಕಾರ್ಯಕ್ಕಾಗಿ / ಬಂದಿದ್ದೀರಿ ನೆಂಟರೇ / ಎಲ್ಲಿಂದ ಬಂದಿರಿ, ಕೇಳುತ್ತಾರೆ)

ವ ದಾನಿ ಕಜ್ಜೋಡುಯೇ
ಬತ್ತರ್ ಬಿನ್ನೇರೇ ಯೇ
ಹಾಂ ಒಲುತ್ತು ಬತ್ತರೀಯೇ
ಒಡೆಗ್ ಪೋಪುನಗ್‌ಲೋ

(ಯಾವ ಕಾರ್ಯಕ್ಕಾಗಿ / ಬಂದಿದ್ದೀರಿ ನೆಂಟರೇ / ಎಲ್ಲಿಂದ ಬಂದಿದ್ದೀರಿ / ಎಲ್ಲಿಗೆ ಹೋಗುವವರು)

ರ ಆಮಂಜೆದ ಇಲ್ಲಾಡೇಯೇ
ಓಮಸಾಲೇಡೇ
ಎಂಗುಲು ಬತ್ತ್‌ನಿಂದ್
ಒಂಜಾ ಬೇಗಾವೋ ಒಂಜಾ ಪನ್‌ಪೇರೇ

ಓಮಸಾಲೆ : ವ್ಯಾಯಾಮ ಶಾಲೆ / ಗರಡಿ?

(ಆಮುಂಜೆ ಮನೆಗೆ / ಓಮ ಶಾಲೆಯಿಂದ / ನಾವು ಬಂದದ್ದು / ಕೂಡಲೆ ಹೇಳುತ್ತಾರೆ)

ವ ಆ ಆಮಜೆದಿಲ್ಲಾಡ್‌ಗ್ ಯೇ
ಆ ಓಮ ಸಾಲೇಡ್‌ಯಾ
ಆ ಇಲ್ಲಾಡ್ ಎಂಕುಲುಲಾವೋ
ಬತ್ತಿನಿ ಪನ್‌ತ್ತೇರೇ
(ಆಮಜೆ ಮನೆಗೆ / ಓಮಸಾಲೆ / ಮನೆಯಿಂದ ನಾವು / ಬಂದದ್ದು ಹೇಳುತ್ತಾರೆ)

ರ ನಿಗ್‌ಲೇ ಇಲ್ಲಾಡ್‌ಯೇ ಯಾ
ದೂರೋಗು ಕೊರುಪೂನ
ಪೊಣ್ಣು ಉಂಡಾ ಮುಟ್ಟೊಗು ಮಾರಿದೀ
ಮುಂಬು ಉಂಡಾ ಇಂದೇರೇ

ಮುಂಬು : ಜಾನುವಾರು / ದನಕರು

(ನಿಮ್ಮ ಮನೆಯಲ್ಲಿ / ದೂರಕ್ಕೆ ಕೊಡುವ / ಹೆಣ್ಣು ಇದೆಯೇ ಹತ್ತಿರಕ್ಕೆ ಮಾರಾಟ ಮಾಡುವ / ದನಕರು ಇವೆಯೇ ಕೇಳುತ್ತಾರೆ)

(ಟಿಪ್ಪಣಿ: ದೂರೋಗು ಕೊರ್ಪುನ ಪೊಣ್ಣು ಉಂಡಾ ಮುಟ್ಟೊಗು ಮಾರುನ ಮುಂಬು ಉಂಡಾ--ಹಿಂದಿನ ಕಾಲದ ತುಳು ಪದ್ಧತಿಯಲ್ಲಿ ಹುಡುಗನ ಮನೆಯರು ಹೆಣ್ಣು ನೋಡಲು ಹುಡುಗಿಯ ಮನೆಗೆ ಹೋಗುತ್ತಾರೆ. ಆಗ ಹುಡುಗ ಮತ್ತು ಹುಡುಗಿಯ ಮನೆಯರ ನಡುವೆ ಸುಂದರವಾದ ಸಂಭಾಷಣೆ ನಡೆಯುತ್ತದೆ; ಸಂಭಾಷಣೆ ಮೇಲೆ ಸೂಚಿಸಿದ ವಾಕ್ಯದಿಂದ ಸುರುವಾಗುತ್ತದೆ.)

ವ ನಿಗಲೆ ಇಲ್ಲಾಡ್‌ಯೇ
ಆ ಮುಟ್ಟೊಗು ಕೊರುಪೀನಾ
ಆ ಮುಂಬುಲಾ ಉಂಡಾಯೇ
ದೂರೋಗು ಕೊರ್ಪಿನಾವೋ
(ನಿಮ್ಮ ಮನೆಯಲ್ಲಿ / ಹತ್ತಿರಕ್ಕೆ ಕೊಡುವ / ದನಕರು ಇವೆಯೇ/ ದೂರಕ್ಕೆ ಕೊಡುವ...)

ರ ಆತೇನೆ ಪನಿನಾಗಾ ಪನ್ತೇರೇ ಅಕ್ಕೆ ಗಿಳಿರಾಮ
ದೆಯ್ಯಾರೆ ಕೈಟ್ಟೇ
ಒಂಜಾ ಈ
ಪರಾ ಐತೋನೋ
(ಅಷ್ಟು ಹೇಳುವಾಗ ಅಕ್ಕೆ ಗಿಳಿರಾಮ / ದೆಯ್ಯಾರಿಗೆ / ನೀನು / ಹಳೆ ಉಡುಗೆ ತೊಡುಗೆ)

ವ ಏರ್ ದಯ್ಯಾರ್ಲಾವೋ
ಗಿಂಡೆಗಿಳಿರಮವೋ ಆ
ಆ ದೆಯ್ಯಾರ್ ದಿಯ್ಯೋಲಾವೋ
ಮೂರ್ತದ ಐತೋನೋ
(ದಯ್ಯಾರ್ / ಗಿಂಡೆಗಿಳಿರಾಮ / ದೆಯ್ಯಾರ್ ಧರಿಸುತ್ತಾಳೆ / ಮದುಮಗಳ ಉಡುಗೆತೊಡುಗೆ)

ರ ನಿಚ್ಚದಾ ಐತೋನೋ
ದೆತ್ತೆರ್ ದೆಯ್ಯಾರ್
ಮದ್ಮಲೆ ಐತಾ ಆವೋನೋ ಬಿನ್ನರೆ
ಎದುರು ತೋಜೇರಿಯೇ
(ನಿತ್ಯದ ಉಡುಗೆತೊಡುಗೆ / ತೆಗೆಯುತ್ತಾರೆ ದೆಯ್ಯಾರ್ / ಮದುಮಗಳ ಉಡುಗೆತೊಡುಗೆ ಅಧರಿಸಿ ನೆಂಟರ/ ಎದುರು ಕಾಣಿಸಿಕೊಳ್ಳುತ್ತಾರೆ)

ವ ನಿಚ್ಚದ ಐತ ಗೆತ್ತ್‌ದ್‌ಯಾ
ಆ ಮದ್ಮಲೆ ಐತಾವೋ ಹಾಂ
ಆ ಮಲ್ದೇರ್ ಆರ್‌ಲಾವೋ ಹಾಂ
ಬಿನ್ನೆರೆ ನಡುಟಾಲಾವೋ
(ನಿತ್ಯದ ಉಡುಗೆತೊಡುಗೆ ತೆಗೆದು / ಮದುಮಗಳ ಉಡುಗೆತೊಡುಗೆ / ಅಧರಿಸುತ್ತಾರೆ ಅವರು / ನೆಂಟರ ನಡುವೆ...)

ರ ಬಿನ್ನೆರೆ ಎದ್‍ರೀಡೇ ಹಾಂ
ಬಿನ್ನೇರೆಗ್‍ಲಾ
ಕೊರ್ಪಿ ಕೊರುನಂಚ್ಚಿನ
ಸೇಜ್ಜನೊಂಜೇ ಕೊರ್ಪದೇರ್‍ಯೇ

ಸೇಜ್ಜ : ಉಡುಗೊರೆ / ಸನ್ಮಾನ; ಹರಿವಾಣದಲ್ಲಿ ಎಲೆ ಅಡಿಕೆ (ತಾಂಬುಲ) ಕೊಡುವ ಪದ್ಧತಿ.

(ನೆಂಟರ ಸಮ್ಮುಖದಲ್ಲಿ / ನೆಂಟರಿಗೆ / ಕೊಡಬೇಕಾದ / ಉಡುಗೊರೆ ಕೊಡಿಸುತ್ತಾರೆ)

ವ ಬಿನ್ನೇರೇಲಾವೋ
ಎದ್‍ರ್ ಉಂತಾದ್‍ಲಾ ಹಾಂ
ಆ ಕೊರಿಪಿ ಸೇಜ್ಜನೋ
ಕೊರ್ಪೆದೇರ್ ದೆಯ್ಯಾರುಯೇ

(ನೆಂಟರ / ಸಮ್ಮುಖದಲ್ಲಿ ನಿಲ್ಲಿಸಿ / ಕೊಡಬೇಕಾದ ಉಡುಗೊರೆ / ಕೊಡಿಸುತ್ತಾರೆ ದೆಯ್ಯಾರ್)

ರ ಆತೆನೆ ಪೊರ್ತುಗವ್ವೋ
ಪನ್ಪೇರ್ ದೆಯ್ಯಾರ್‍ಡಿನಾಲಾ
ದೂರೋಗು ಕೊರುತ್ತುಜಿ ಒಂಜಾ ಪೊಣ್ಣು
ಉಂಡು ಎಲ್ಯಾಲೋ

(ಅಷ್ಟು ಹೊತ್ತಿಗೆ / ದೆಯ್ಯಾರು ಹೇಳುತ್ತಾರೆ / ದೂರಕ್ಕೆ ಕೊಡದ ಹೆಣ್ಣು / ಸಣ್ಣ ಪ್ರಾಯದವಳು ಇದ್ದಾಳೆ)

ವ ದೂರೋಗೋ ಕೊರ್ಪುಯೇ
ಆ ಮುಂಬುಯೇ ಎಂಕುಲುಯಾ
ಆ ಅರೆಬೇಸಾಗ್‍ಯೇ
ಕೊರುದು ಪೋತಾಯೇ

ಬೇಸ : ಮೇ, ಜೂನ್; ಅರೆ : ಮಧ್ಯ

(ದೂರಕ್ಕೆ ಕೊಡುವ / ದನಕರು / 'ಬೇಸ' ತಿಂಗಳ ಮಧ್ಯದಲ್ಲಿ / ಮಾರಾಟ ಮಾಡಿ ಹೋಗಿವೆ)

ರ ಕೊರುಪಿ ಮುಂಬೋನೋ
ಅರೆ ಬೇಸಾಡೇ
ಕೊರುಪಿ ಪೊಣ್ಣಾನ್ ಅರೆ ಪಗ್ಗು
ಸುಗ್ಗಿಡ್ ಕೊರುತಾಯೇ

ಪಗ್ಗು : ಎಪ್ರಿಲ್, ಮೇ ಸುಗ್ಗಿ : ಮಾರ್ಚ್ / ಎಪ್ರಿಲ್

(ಮಾರಾಟ ಮಾಡುವ ದನಕರು / 'ಬೇಸ' ತಿಂಗಳ ಮಧ್ಯದಲ್ಲಿ ಕೊಟ್ಟಿದ್ದೇವೆ / ಮದುವೆಮಾಡಿ ಕೊಡುವ ಹೆಣ್ಣು ಮಗಳನ್ನು 'ಪಗ್ಗು' / 'ಸುಗ್ಗಿ' ತಿಂಗಳ ಮಧ್ಯದಲ್ಲಿ ಮದುವೆಮಾಡಿ ಕೊಟ್ಟಿದ್ದೇವೆ)

ವ ಮುಟ್ಟೋಗು ಕೊರುಪುನಾವೋ
ಪೊಣ್ಣಾನ್ ಎಂಕುಲು ಆ
ಆ ಸುಗ್ಗಿಲಾ ಪಗ್ಗುಲಾವೋ
ಆ ಕೊರುತ ಪನ್‌ಪೇರೇ

(ಹತ್ತಿರಕ್ಕೆ ಮದುವೆ ಮಾಡಿ ಕೊಡುವ / ಹೆಣ್ಣನ್ನು ನಾವು / 'ಸುಗ್ಗಿ' 'ಪಗ್ಗು' ತಿಂಗಳಲ್ಲಿ / ಮದುವೆಮಾಡಿ ಕೊಟ್ಟಿದ್ದೇವೆ ಹೇಳುತ್ತಾರೆ)

ರ ನನ ಇತ್ತಿದೇಯೇ ದೆಯ್ಯಾರ್ ಉಲ್ಲೇರ್
ತಿಪ್ಪಿಡ್ ಪೊಯ್ಯ ಪಾಡ್‌ದ್
ಗೊಬ್ಬೀ ಪೊಣ್ಣು
ಪನ್‌ಪೇರ್‌ಗೇಯೇ

(ಇನ್ನಿರುವುದು ದೆಯ್ಯಾರ್ / ತೆಂಗಿನ ಗರಟೆಯಲ್ಲಿ ಹೊಯಿಗೆ ಹಾಕಿ/ ಆಡುವ ಹೆಣ್ಣು ಮಗಳು / ಹೇಳುತ್ತಾರೆ)

ವ ನನ ಇಪ್ಪುನಾವೋ ಆ
ಆ ಎಲ್ಯ ಪ್ರಾಯದಾವೋ ಆ
ಆ ತಿಪ್ಪಿಡ್ ಕಲ್ಲ್‌ಡ್‌ಯೇ
ಗೊಬ್ಬುನ ಪೊಣ್ಣು ಪಂಡೇರೇ

(ಇನ್ನು ಇರುವವಳು/ ಎಳೆ ಪ್ರಾಯದವಳು / ತೆಂಗಿನ ಗರಟೆಯಲ್ಲಿ ಕಲ್ಲಿನಲ್ಲಿ / ಆಡುವ ಹೆಣ್ಣು ಮಗಳು ಹೇಳುತ್ತಾರೆ)

ರ ಬಿದಿರಿ ಸೀರೇನೇಯೇಯಾ
ತುತ್ತರಾ ಗೊತ್ತೂಜ್ಜಿ
ಬಿದಿರಿ ತರೇನೇಯೇ ಕಟ್ರ ಗೊತ್ತುಜ್ಜೀ
ಎಂಕ್‌ಲೆ ಬಾಲೇಗೇಯೇ

(ಸಡಿಲಾದ ಸೀರೆಯನ್ನು / ಪುನಃ ಸರಿಯಾಗಿ ಧರಿಸಲು ಗೊತ್ತಿಲ್ಲ / ಬಿಚ್ಚಿದ ಕೂದಲು ಕಟ್ಟಲು ಗೊತ್ತಿಲ್ಲ / ನಮ್ಮ ಹುಡುಗಿಗೆ)

ವ ಬಿದಿರಿ ಸೀರೇನೇ
ತುತ್ತರ ಗೊತ್ತುಜ್ಜಿಯಾ
ಆ ಬಿದಿರಿ ತರೇನಿಲಾವೋ
ಆ ಕಟ್ರ ಗೊತ್ತುಜ್ಜಿಂದೇರೇ

(ಸಡಿಲಾದ ಸೀರೆಯನ್ನು / ಪುನಃ ಸರಿಯಾಗಿ ಧರಿಸಲು ಬರುವುದಿಲ್ಲ / ಬಿಚ್ಚಿದ ಕೂದಲು/ ಕಟ್ಟಲಿಕ್ಕೆ ಗೊತ್ತಿಲ್ಲವೆಂದು ಹೇಳುತ್ತಾರೆ)

ರ ಎಂಗಲೆ ಕೈಟ್‌ಯಿತ್ತಿನಾವೋ
ಆಣ್ ಪಂಡೇರೇ
ನಾಲ್ ಜೋಕುಲೇ ಮದ್ಯೋಡು ಗೊಬ್ಬುದು
ಗೊಬ್ಬೊಂದು ಇತ್ತೀ ಬಾಲೇಯೇ

(ನಮ್ಮಲ್ಲಿರುವ / ಹುಡುಗ, ಹೇಳುತ್ತಾರೆ / ಮಕ್ಕಳೊಟ್ಟಿಗೆ ಆಡಿದ / ಆಡುತ್ತಾ ಇರುವ ಬಾಲಕ)

ವ ಎಂಕಲೆ ಕಡೆತ್ತಾವೋ
ಆಣ್ ಉಂಡುಗೇಯಾ
ಆ ಜೋಕುಲೊಟ್ಟುಲಾವೋ ಗೊಬ್ಬುನ
ಮಗೆ ಪಂಡೇರೇ

(ನಮ್ಮ ಕಡೆಯ / ಹುಡುಗ ಇದ್ದಾನೆ / ಮಕ್ಕಳೊಟ್ಟಿಗೆ ಆಡುವ / ಬಾಲಕ ಹೇಳುತ್ತಾರೆ)

ರ ಕೋಲು ದೊನ್ನೆ ಪತೊಂದೋ
ಆ ಗೊಬ್ಬುದಿ ಬಾಲೆಂದೇರೆ
ಆಣ ಸಾಲೋಲಿಯೇ
ಪೊಣ್ಣ ಸಂಬಂದಾಯೇ

ಸಲೋಲಿ /
ಸಾಲಾವಳಿ : ಗುಣಕೂಡಿಬರುವಿಕೆ; ವಧುವರರ ಜನ್ಮನಕ್ಷತ್ರ ನೋಡಿ ಮದುವೆ ಮಾಡುವುದು

(ಕೋಲು, ದೊಣ್ಣೆ ಹಿಡಿದುಕೊಂಡು / ಆಡಿದ ಬಾಲಕ / ಹುಡುಗನ ನಕ್ಷತ್ರ / ಹುಡುಗಿಯ ನಕ್ಷತ್ರ ನೋಡಿ)

ವ ಕೋಲು ದೊನ್ನೇಯೇಯಾ
ಪತೊನುದು ಗೊಬ್ಬುನಾವೋ ಆ
ಆ ಬಾಲೆ ಪಂಡೇದ್‌ಲಾವೋ
ಆಣ ಸಂಬಂದಾಯೇ

(ಕೋಲು, ದೊಣ್ಣೆ / ಹಿಡಿದು ಆಡುವ / ನಮ್ಮ ಬಾಲಕ ಎಂದು ಹೇಳಿ / ಹುಡುಗನ ನಕ್ಷತ್ರ)

ರ ಆಣ ಸಂಬಾಂದಾ
ಪೊಣ್ಣಾವೋ ಸಲೋಲಿ ಉಂಡುಗೇ
ದೇವೆರೆ ಅಸ್ರಣ್ಣೇರ್ದ ಕೇಂಡ್‌ದ್ ದಿನಮಾನ
ಮದ್ಮೇಗ್ ಮಲ್ದೇರೇ

ಅಸ್ರಣ್ಣೆರ್ : ವೈದಿಕ ಅರ್ಚಕರು

(ಹುಡುಗನ ನಕ್ಷತ್ರ / ಹುಡುಗಿಯ ನಕ್ಷತ್ರ ಹೊಂದಿ ಬರುತ್ತವೆ / ವೈದಿಕ ಅರ್ಚಕರಲ್ಲಿ ಕೇಳಿ ಶುಭದಿನ / ಮದುವೆಗೆ ನಿಶ್ಚಯ ಮಾಡುತ್ತಾರೆ)

ವ ಆಣ ಸಂಬಂದಾವೋ
ಆ ಪೊಣ್ಣಾ ಸಾಲೋಲಿಯಾ
ಆ ನಡತ್ತ್ ಬತ್ತ್‌ದ್‌ಲಾವೋ
ದೇವೆರೆ ಬಟ್ರೆಡಾಯೇ
(ಹುಡುಗನ ನಕ್ಷತ್ರ / ಹುಡುಗಿಯ ನಕ್ಷತ್ರ / ಹೊಂದಿಕೆಯಾಗುತ್ತವೆ / ದೇವರ ಪೂಜೆ ಮಾಡುವ ಭಟ್ಟರಲ್ಲಿ...)

ರ ಮದ್ಮೆಗ್ ದಿನಮಾನನೋ
ಆ ಒಂಜಾ ಮಲ್ದೇರ್ ಹಾಂ
ಆ ದೆಯ್ಯಾರಾ ಮದಿಮೇಲಾ
ಇನಿ ಅಂಗಾರೆತ್ತ್ ಮೇಲಿ ಅಂಗಾರೆಂದೇರೇ

ಅಂಗಾರೆ : ಮಂಗಳವಾರ
(ಮದುವೆಗೆ ದಿನ ನಿಶ್ಚಯ / ಮಾಡುತ್ತಾರೆ / ದೆಯ್ಯಾರಳ ಮದುವೆ/ ಈ ಮಂಗಳವಾರವಲ್ಲ ಮುಂದಿನ ಮಂಗಳವಾರ ಹೇಳುತ್ತಾರೆ)

ವ ಮದುಮೆಗ್ ದಿನಮಾನಾವೋ
ಆ ಮಲ್‌ದೇರೀಯೇ ಹಾಂ
ಆ ದೆಯ್ಯಾರಾ ಮದಿಮೇನೇ
ಅಂಗಾರೆ ದಿನತ್ತಾನೇ
(ಮದುವೆಗೆ ದಿನ / ನಿಶ್ಚಯ ಮಾಡುತ್ತಾರೆ / ದೆಯ್ಯಾರಳ ಮದುವೆ / ಮಂಗಳವಾರ ದಿವಸ)

ರ ದೆಯ್ಯಾರಾ ಮದೀಮೇದಾ
ದಿಬ್ಬಣಾ ಒಂಜಾ ಕೂಡದೇರೇ
ಕೂಡಾವೊನೊದೋ ದಿಬ್ಬಣ ಪತೋಂದೋ
ಒಂಜಾ ಪೋವೇರಿಯೇ
(ದೆಯ್ಯಾರಳ ಮದುವೆಯ / ದಿಬ್ಬಣ ಒಟ್ಟು ಕೂಡಿಸುತ್ತಾರೆ / ದಿಬ್ಬಣ ಕೂಡಿಸಿ, ದಬ್ಬಣ ಹಿಡಿದುಕೊಂಡು / ಹೋಗುತ್ತಾರೆ)

ವ ಆ ದೆಯ್ಯಾರಾ ದಿಬ್ಬಣೋನೋ
ಆ ಪತೋಂದುಲಾವೋ ಆ
ಆ ಕೂಡಾವೊನೋದು ದಾಲಾವೋ
ಪೋಯೇರ್ ದೆಯ್ಯಾರುರೇ
(ದೆಯ್ಯಾರಳ ಮದುವೆಯ ದಿಬ್ಬಣ / ಹಿಡಿದುಕೊಂಡು / ಒಟ್ಟು ಕೂಡಿ / ಹೋಗುತ್ತಾರೆ ದೆಯ್ಯಾರ್)

ರ ದಾರೆದ ದೊಂಪೋಗೋ
ಪೊನಾಗವ್ವೋ ದಾನೆ ಪನ್‌ತೇರೆ
ಬಲ್ಲಾಲ್ ದಾಲಾ ಬಿನ್ನೆರೆ ಕಡೆತ್ತಗ್‌ಲ್
ಎದ್‌ರ್ ಬತ್ತ್‌ದ್‌ಯೇ

ದಾರೆದ ದೊಂಪ : ಮದುವೆಯ ಚಪ್ಪರ
(ಮದುವೆಯ ಚಪ್ಪರಕ್ಕೆ / ಹೋಗುವಾಗ ಹೇಳುತ್ತಾರೆ / ಬಲ್ಲಾಳರ ಕಡೆಯವರು ದಿಬ್ಬಣದ ನೆಂಟರಿಗೆ, / ಎದುರು ಬಂದು)

ವ ದಾಲಾ ಬಿನ್ನೇರೇನೇಯೇ
ಆ ದಿಬ್ಬಣಾ ಪತೊಂದೂ ಆ
ಆ ಪೋದು ಉಂತುನಾಗಾವೋ
ಏರಿಯಾ ಆಲಾವೋ
(ದಿಬ್ಬಣದ ನೆಂಟರು / ದಿಬ್ಬಣ ಹಿಡಿದುಕೊಂಡು / ಹೋಗಿ ನಿಂತಾಗ / ಅವರು...)

ರ ಬತ್ತ್‌ನಾ ಬಿನ್ನೇರೇಗೇ
ಒರ್‌ವರ ಪೂವಾ ತಂಬಿಲ
ಕಾಡವ್ ಕೈಟ್ಟ್ ಕಾರ್‌ಗ್ ನೀರ್
ಕೊರ್ತೆರ್ ದೆಯ್ಯಾರ್‌ಗ್‌ಲಾವೋ

ಒರ್ವರ : ಒಂದು ಸಲ; ಪೂ ತಂಬಿಲ : ಹೂ ಕೊಟ್ಟು ಸ್ವಾಗತಿಸುವ ಕ್ರಮ
(ದಿಬ್ಬಣದ ನೆಂಟರಿಗೆ / ಒಂದು ಸಲ ಹೂ / ಕೊಟ್ಟು ಕೈ ಕಾಲು ತೊಳೆಯಲು ನೀರು / ಕೊಡುತ್ತಾರೆ ದೆಯ್ಯಾರಿಗೆ)

(ಟಿಪ್ಪಣಿ: ತುಳುವ ಆರಾಧನಾ ಪದ್ಧತಿಯಲ್ಲಿ, ತಂಬಿಲ ಒಂದು ರೀತಿಯ ಅರ್ಪಣೆ: 'ಅಕ್ಕಿ ತೆಂಗಿನ ಕಾಯಿಯ ಸ್ವಸ್ತಿಕೆಯಿಟ್ಟು ಕಜ್ಜಾಯ, ಹಣ್ಣು, ವೀಳ್ಯದೆಲೆ, ಅಡಿಕೆ, ನೈವೇದ್ಯಗಳನ್ನು ಸಮರ್ಪಿಸಿ ಭೂತ, ನಾಗ ಮೊದಲಾವುಗಳಿಗೆ ಮಾಡುವ ಪೂಜಾ ವಿಧಾನ' [ತುಳು ನಿಘಂಟು]; ದೈವ (ಭೂತಗಳಿಗೆ) 'ಬೋಗ ತಂಬಿಲ' [ರಕ್ತಾಹಾರ] ; ನಾಗನಿಗೆ 'ತನು ತಂಬಿಲ' [ಸೀಯಾಳ, ಹಾಲು] ಅರ್ಪಿಸುವುದು.)

ವ ಬತ್ತ್‌ನ ಬಿನ್ನೇರೇಗೇಯೇ
ಆ ನೀರ್ ದಾನಿಯಾ
ಕೊರ್ತೆರ್ ಆರ್‌ಲಾವೋ
ಬಿನ್ನೇರ್ ಬನ್ನಾಗಾಯೇ
(ಬಂದ ದಿಬ್ಬಣದ ನೆಂಟರಿಗೆ / ನೀರು / ಕೊಡುತ್ತಾರೆ ಅವರು / ನೆಂಟರು ಬಂದಾಗ)

ರ ಕೊರ್ತೆರ್ ದಾನೀನೀ ದಾಲಾವೋ
ಕೈಟ್ಟ್ ಕಾರ್‌ಗ್ ನೀರೇ
ಕೊರುದು ದೊಂಬೂಡೋ ಬತ್ತಿನ ಬಿನ್ನೆರೆಗ್
ಅಸರ್‌ಗ್ ನೀರ್ ಕೊರ್ತೇರೇ

ದೊಂಬು : ಬಿಸಿಲು
(ಕೊಡುತ್ತಾರೆ / ಕೈ ಕಾಲು ತೊಳೆಯಲು ನೀರು / ಕೊಟ್ಟು ಬಿಸಿಲಿನಲ್ಲಿ ಬಂದ ಅತಿಥಿಗಳಿಗೆ / ಬಾಯಾರಿಕೆ ತಣಿಸಲು ನೀರು ಕೊಡುತ್ತಾರೆ)

ವ ದೊಂಬುಗು ಬತ್ತಿನಾವೋ
ಬಿನ್ನೆರೇಗೇ ಆಲಾದಾನಿಯಾ
ಆ ಅಸರಗ್ ನೀರ್‌ಲಾವೋ
ಆ ಕೊರ್ಯೆರ್ ಸಾಲೇರ್‌ಯೇ
(ಬಿಸಿಲಿನಲ್ಲಿ ಬಂದ / ದಿಬ್ಬಣದ ನೆಂಟರಿಗೆ / ಬಾಯಾರಿಕೆಗೆ ನೀರು / ಕೊಡುತ್ತಾರೆ ಸಾಲೇರ್)

ರ ಸಾಲೇರ್ ಪನಿತ್ತೇರೀ
ಬಿನ್ನೇರೇ ಬಿನ್ನೇರೇ ನಿಗುಲಾಂಡ
ತೆರಿದ್ ಬತ್ತಿನಾ ದಾಲಾ
ದೆಯ್ಯ್ಯಾರುಗ್ ಒಂಜಾ ಪನ್‌ವೇರೇ
(ಸಾಲೇರ್ ಹೇಳುತ್ತಾರೆ / ನೆಂಟರೇ ಓ ನೆಂಟರೇ / ತಿಳಿದು ಬಂದಿದ್ದೀರಾ / ದೆಯ್ಯ್ಯಾರಿಗೆ ಹೇಳುತ್ತಾರೆ)

ವ ದಾಲಾ ದಾನೀಲಾವೋ
ಆ ಪಂಡೇರ್ ಸಾಲೇರ್ ಹಾಂ
ಆ ಏಕ ಸಾಲೇರ್‌ಲಾವೋ
ಪನ್ನಾಗುಂಡುಗೇಯೇ
(ಹೀಗೆ / ಹೇಳುತ್ತಾರೆ ಸಾಲೇರ್ / ಏಕ ಸಾಲೇರ್ / ಹೇಳುವಾಗ)

ರ ಆಮಂದಾಜೇಡೇಯಾ
